

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 194 Thursday 10-04-2025 E-mail : maruti.b.hosamani76@gmail.com Page: 4 Price : Rs. 1/-


# ರಾಷ್ಟ್ರೀಯ ಹಾಗೂ ಕರ್ನಾಟಕ ರಾಜ್ಯ ರೈತ ಸಂಘದಿಂದ ಪಾದಯಾತ್ರೆ ಕಾರ್ಯಕ್ರಮಕ್ಕೆ ಕರೆ

**ಸಿಹಿ ಕಹಿ ಸುದ್ದಿ,**

**ತಾಳಿಕೋಟೆ:** ತಾಳಿಕೋಟಿ ತಾಲೂಕಿನ ಕಲಕೇರಿ ಹೋಬಳಿ ಮಟ್ಟದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿಗಳಲ್ಲಿ ಬರುವ ಹಳ್ಳಿಗಳಿಗೆ 2024.2025 ನೇ. ಸಾಲಿನ. ಫಸಲ್ ಭೀಮಾ ಯೋಜನೆ ಬೆಳೆ ವಿಮ ಹಾಗೂ ರೈತರ ಪರಿಹಾರ ಬರದಿದ್ದ ಕಾರಣಕ್ಕೆ ಕಲಕೇರಿಯಿಂದ ಶ್ರೀ ಗುರು ವೀರಘಂಟಿ ಮಡಿವಾಳೇಶ್ವರ ದೇವಸ್ಥಾನ ದಿಂದ ವಿಜಯಪುರ ಜಿಲ್ಲಾ ಕಚೇರಿಗೆ ಪಾದಯಾತ್ರೆ ರೈತರಿಂದ ನಡೆಯುವುದು ದಿನಾಂಕ 20.4.2025 ರಿಂದ ಬೆಳಿಗ್ಗೆ 8:00 ಗಂಟೆಗೆ ಪಾದಯಾತ್ರೆ ಪ್ರಾರಂಭ ಕೈಗೊಂಡು ವಿಜಯಪುರ ಜಿಲ್ಲಾ ಕಚೇರಿ ವರೆಗೂ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಎಲ್ಲಾ ರೈತರು ಈ ಪಾದಯಾತ್ರೆಯಲ್ಲಿ ಪಾಲ್ಗೊಂಡು ನಮ್ಮ ಬೇಡಿಕೆಯನ್ನು ಈಡೇರವರಿಗೂ ಈ ಹೋರಾಟ ನಿಲ್ಲುವುದಿಲ್ಲ ಎಂದು ಈ ಸಂದರ್ಭದಲ್ಲಿ ರೈತರು ತಿಳಿಸಿದರು. ಹಸಿರೇ ಉಸಿರು.ಜೈಜವಾನ್‌ಜೈಕಿಸಾನ್.ಈದೇಶದಶಕ್ತಿ ರೈತರು ಎನ್ನುವುದು ಸರಕಾರಕ್ಕೆ ತೋರಿಸಬೇಕು ರೈತ ಈ ದೇಶದ ಬೆನ್ನೆಲುಬು ಎನ್ನುವುದು ಸರಕಾರಕ್ಕೆ ತೋರಿಸಬೇಕು ಜಗತ್ತಿನಲ್ಲಿ ರೈತ ಬೆಳೆದರೆ ನಮಗೆಲ್ಲಾ ಅನ್ನ ಎನ್ನುವುದು ಸರಕಾರಿ ಅಧಿಕಾರಿಗಳು ರಾಜಕಾರಣಿಗಳು ಮರೆತಿದ್ದಾರೆ ರೈತ ಏನು ಬೆಳೆಯಲಿಲ್ಲ ವೆಂದರೆ ಜಗತ್ತಿನಲ್ಲಿ ಯಾರೋ ಉಳಿಯುವುದಿಲ್ಲ ರಾಜಕಾರಣಿಗಳು ಸರ್ಕಾರಿ ಅಧಿಕಾರಿಗಳು ಮೊದಲು ನೀವು ರೈತರಿಗೆ ಗೌರವ ಕೊಡಿ. 20.4.25 ತಾರೀಖಿನ



ಒಳಗೆ ನಮ್ಮ ತಾಳಿಕೋಟೆ ತಾಲೂಕಿನ ಕಲಕೇರಿ ಹೋಬಳಿ ಮಟ್ಟದಲ್ಲಿ ಬರುವ ಗ್ರಾಮ ಪಂಚಾಯಿತಿಗಳಲ್ಲಿ ಬರುವಂತ ಹಳ್ಳಿಗಳಿಗೆ ಫಸಲ್ ಭೀಮಾ ಯೋಜನೆ ಬೆಳೆ ವಿಮ ಹಾಗೂ ರೈತರ ಪರಿಹಾರ ರೈತರಿಗೆ ಬರುವಂತೆ ಮಾಡಬೇಕು ಹಾಗೂ ಬೆಕಿನಾಳ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವಂತ ಹಳ್ಳಿಗಳಿಗೆ ಫಸಲ್ ಭೀಮಾ ಯೋಜನೆ ಬೆಳೆ ಪರಿಹಾರ ಬೆಳೆ ವಿಮ ಬರಬೇಕು ಇಲ್ಲದಿದ್ದರೆ ನಮ್ಮ ರೈತರ ಪಾದಯಾತ್ರೆ ವಿಜಯಪುರ ಜಿಲ್ಲಾ ಕಚೇರಿವರೆಗೂ ನಡೆಯುವುದು ಎಂದು ಈ ಸಂದರ್ಭದಲ್ಲಿ ರೈತರು ಹೇಳಿ ನಾಳೆ ದಿನ ರೈತರೆಲ್ಲರೂ ಜಮಾವಣೆ ಗೊಳ್ಳುಲು ರೈತರಿಂದ ಕರೆ ಆಗಿದೆ.

ಈ ಸಂದರ್ಭದಲ್ಲಿ ಪಾಲ್ಗೊಂಡ ರೈತರು. ರಾಷ್ಟ್ರೀಯ ರೈತರ ಸಂಘ. ಕರ್ನಾಟಕ ರಾಜ್ಯ ರೈತ ಸಂಘ & ಕಬ್ಬು ಬೆಳೆಗಾರರ ಒಕ್ಕೂಟ. ರಾಜ್ಯ ಪ್ರಧಾನ ಕಾರ್ಯದರ್ಶಿ ರೇಣುಕಾ ಪಾಟೀಲ್. ಜಿಲ್ಲಾ ಅಧ್ಯಕ್ಷರಾದ ಹಣಮಂತ ವಡ್ಡರ್. ಜಿಲ್ಲಾ ಉಪಾಧ್ಯಕ್ಷರಾದ ಮ?ಬೂಬಬಾಷ ಮನಗೂಳಿ. ತಾಲೂಕ ಅಧ್ಯಕ್ಷರಾದ ಅಶೋಕ್ ಗೌಡ ಪಾಟೀಲ್. ಯುವ ಮೋರ್ಚಾ ಅಧ್ಯಕ್ಷರಾದ ಗೌಡಪ್ಪಗೌಡ ಹಳಿಮನಿ. ಈ ಎಲ್ಲಾ ರೈತರ ಮುಖಂಡರ ನೇತೃತ್ವದಲ್ಲಿ ಪಾದಯಾತ್ರೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕರೆ ನೀಡಿ–ದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ. ತಾಳಿಕೋಟೆ**

# ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ SRE ಇಂಡಿಪೆಂಡೆಂಟ್ ಕಾಲೇಜಿನ ವಿದ್ಯಾರ್ಥಿನಿಯರು ವಿಜ್ಞಾನ, ಮತ್ತು ಕಲಾ ವಿಭಾಗದಲ್ಲಿ – ಪ್ರಥಮ ಸ್ಥಾನ

**ಸಿಹಿ ಕಹಿ ಸುದ್ದಿ,**

**ಜೇವರ್ಗಿ :** ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು. ನಗರದ ಖಖಇ ಇಂಡಿಪೆಂಡೆಂಟ್ ಪಿ.ಯು ಕಾಲೇಜಿನ ವಿದ್ಯಾರ್ಥಿನಿಗಳಾದ ಕು.ಮೀನಾಕ್ಷಿ ವಿಜ್ಞಾನ ವಿಭಾಗದಲ್ಲಿ 97.66% ಪ್ರತಿಶತ ಅಂಕ ಪಡೆದು ಕಲಬುರಗಿ ಜಿಲ್ಲೆಗೆ 6 ನೇ. ರ್‍ಯಾಂಕ್ ತಾಲೂಕಿಗೆ ಪ್ರಥಮ ಸ್ಥಾನ ಮತ್ತು ಕಲಾ ವಿಭಾಗದಲ್ಲಿ ಕು.ಸಮೀನಾ 97.66% ಪ್ರತಿಶತ ಅಂಕ



ಪಡೆದು ಕಲಬುರ್ಗಿ ಜಿಲ್ಲೆಗೆ 3 ನೇ. ರ್‍ಯಾಂಕ್ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ದಾಖಲೆ ನಿರ್ಮಿಸಿ ತಮ್ಮ ಶಿಕ್ಷಣ ಸಂಸ್ಥೆಗೆ ಉನ್ನತ ಶ್ರೇಣಿಯ ಹೆಸರು ತಂದು ಕೊಟ್ಟಿದ್ದಾರೆ ಅವರಿಗೆ ಕಾಲೇಜಿನ ಆಡಳಿತ ಮಂಡಳಿ ಹಾಗೂ ಪ್ರಾಚಾರ್ಯರು, ಹಾಗೂ ಸಿಬ್ಬಂದಿ ವರ್ಗದವರು ಶುಭ ಹಾರೈಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಾಶಂಕರ.ಎನ್.ಇಜೇರಿ**

# ಪಿ.ಯು.ಸಿ ವಸತಿ ನಿಲಯದ ವಿದ್ಯಾರ್ಥಿಗಳ ಉತ್ತಮ ಸಾಧನೆ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಬಡ ವಿದ್ಯಾರ್ಥಿಗಳಿಗೆ ವಸತಿ ನಿಲಯದ ವಾರ್ಡನ್ ಆದ ಹುಸೇನ್ ಬಡಿಗೇರ್ ಅವರು ಈ ಮೊದಲು ಶಿಕ್ಷಕ ವೃತ್ತಿಯಿಂದ ಬಂದವರಾಗಿದ್ದು ಅವರು ಅತ್ಯಂತ ಕ್ರೀಯಾಶೀಲ & ಸಂಘಟನಾತ್ಮಕ ಹಾಗೂ ರಚನಾತ್ಮಕವಾಗಿ ಕಾರ್ಯ ಚಟುವಟಿಕೆಗಳಲ್ಲಿ ಸದಾ ತೊಡಗಿ ಕೊಳ್ಳುತ್ತಿದ್ದರು.

ಏತನ್ಮಧ್ಯೆ ಅವರು ಒಲವು ವಾರ್ಡ್ ನ್ ಹುದ್ದೆ ಕಡೆ ವಾಲಿತು ಹಾಗಾಗಿ ಹುಸೇನ್ ಬಡಿಗೇರ್ ರವರ ಗರಡಿಯಲ್ಲಿ ಪಳಗಿದ ಬಡ ವಿದ್ಯಾರ್ಥಿಗಳಿಗೆ ವರದಾನ ಆಯಿತೆಂದರೆ ಅತಿಶಯೋಕ್ತಿ





ಆಗಲಾರದು. ಅವರ ಮಾರ್ಗದರ್ಶನದಲ್ಲಿ ಮಾನ್ವಿ ಪಟ್ಟಣ ದಲ್ಲಿರುವ ಡಾ, ಬಿ.ಆರ್ ಅಂಬೇಡ್ಕರ್ ಪಿ.ಯು.ಸಿ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳ ಪಿ.ಯು.ಸಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಹೆಮ್ಮೆಯಿಂದ ಹೇಳಿಕೊಂಡ ಮಾನ್ವಿ ತಾಲೂಕಿನ ತಾಲೂಕ ಸಮಾಜ ಕಲ್ಯಾಣ ಅಧಿಕಾರಿಗಳಾದ ಸಹಾಯಕ ನಿರ್ದೇಶಕರಾದ ನಟರಾಜ್ ಸಾಹೇಬ್ರು.

ವಸತಿ ನಿಲಯದ ವಿದ್ಯಾರ್ಥಿಗಳು 1) ಕುಮಾರ್ ಸುದೀಪ್ ಪ್ರಥಮ 85% 2) ಗಣೇಶ ದ್ವಿತೀಯ 74% 3) ಹನಮಂತ ತೃತೀಯ 73% ಅಭಿನಂದನೆಗಳು. ಸಹಾಯಕ ನಿರ್ದೇಶಕರಾದ ನಟರಾಜ. ನಿಲಯ ಪಾಲಕರು ಹುಸೇನ್ ಬಡಿಗೇರ್. ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ಎಂದು ವರದಿಯಾಗಿದೆ.


**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ದಿಶಾ ಸಮಿತಿ ನಾಮ ನಿರ್ದೇಶಿತ ಸದಸ್ಯರಾಗಿ ಕಾಶೀರಾಯಗೌಡ ನೇಮಕ



**ತಾಳಿಕೋಟಿ :** ತಾಲೂಕಿನ ಪೀರಾಪೂರ ಗ್ರಾಮದವರಾದ ಕಾಶೀರಾಯಗೌಡ ಗುರನಗೌಡ ಬಿರಾದಾರ ಇವರನ್ನು ಜಿಲ್ಲಾ ದಿಶಾ ಸಮಿತಿಗೆ ನಾಮ ನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಮಂಗಳವಾರ ವಿಜಯಪುರ ನಗರದ ಲೋಕಸಭಾ ಸಂಸದರ ಕಾರ್ಯಾಲಯದಲ್ಲಿ ನಡೆದ ಸಭೆಯಲ್ಲಿ ಇವರ ನೇಮಕದ ಆದೇಶವನ್ನು ಪ್ರಕಟಿಸಲಾಯಿತು. ಈ ಸಂದರ್ಭದಲ್ಲಿ ಸಂಸದ ರಮೇಶ ಜಿಗಜಿಣಗಿ ಅವರು ಮಾತನಾಡಿ ಕೇಂದ್ರ ಸರ್ಕಾರದ ಉದ್ದೇಶಿತ ಕಾರ್ಯಕ್ರಮಗಳ ಅನುಷ್ಠಾನ, ಪ್ರಗತಿ ಪರಿಶೀಲನೆ ಹಾಗೂ ಅವುಗಳನ್ನು ಬಲಪಡಿಸುವ ಉದ್ದೇಶದಿಂದ ರಚನೆಗೊಂಡಿರುವ ಈ ಮಹತ್ವದ ಸಮಿತಿಗೆ ನಿಮ್ಮನ್ನು ನಾಮ ನಿರ್ದೇಶಿತ ಗೊಳಿಸಲಾಗಿದೆ, ಸೇವೆಯನ್ನು ಮಾಡುವ ಉತ್ತಮ ಅವಕಾಶ ಸಿಕ್ಕಿದೆ ಇದರ ಸದ್ಬಳಕೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು. ಈ ವೇಳೆ ಮುಖಂಡರಾದ ವಾಯ್.ವಾಯ್.ಹಿಪ್ಪರಗಿ, ಸಿದ್ದನಗೌಡ ಬಿರಾದಾರ (ಕಾರಗನೂರ), ಸುರೇಶ ಕುಮಾರ ಇಂಗಳಗೇರಿ (ಪೀರಾಪೂರ), ಮಡಿವಾಳಪ್ಪಗೌಡ ಬಿರಾದಾರ, ಶಿವನಗೌಡ ಪಾಟೀಲ (ಗೊಟಖಂಡಕಿ), ಬಸನಗೌಡ ಚಿಂಚೋಳಿ, ಅಯ್ಯಪ್ಪ ದೊಡ್ಡಮನಿ, ಸುಭಾಸ ನಡುವಿನಮನಿ (ಗುಂಡುಕನಾಳ) ಮತ್ತಿತರರು ಇದ್ದರು.

# ಯಶಸ್ವಿ ಉಚಿತ ದಂತ ತಪಾಸಣೆ ಶಿಬಿರ



**ಇಳಕಲ್ :** ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಅಮ್ಮಾ ಸೇವಾ ಸಂಸ್ಥೆಯಲ್ಲಿ ಇಂದು ಬಾಗಲಕೋಟೆಯ ಎನ್ ಎಮ್ ಎನ್ ಎಮ್ ದಂತ ಮಹಾವಿದ್ಯಾಲಯದಿಂದ ಉಚಿತ ದಂತ ತಪಾಸಣೆ ಶಿಬಿರ ಯಶಸ್ವಿಯಾಗಿ ನಡೆಯಿತು.ಒಟ್ಟು 50 ಕ್ಕೂ ಅಧಿಕ ಜನರ ದಂತಗಳನ್ನು ತಪಾಸಣೆ ನಡೆಸಿ ಅದರಲ್ಲಿ 8 ಜನರಿಗೆ ಚಿಕಿತ್ಸೆ ನೀಡಲಾಯಿತು ಎಂದು ಪ್ರಾಚಾರ್ಯ ಡಾ, ಶ್ರೀನಿವಾಸ ವಣಕಿ ತಿಳಿಸಿದರು.ಡಾ ಸ್ನೇಹಾ ವಣಕಿ ,ಡಾ ಮಹೇಶ, ಡಾ ಕೆ,ಸ್ವಾತಿ ಜಿ,ಡಾ ಶ್ರೀಕಾ,ಡಾ ಸಂಸ್ಕೃತಿ,ಡಾ ಸುಮನ್,ಡಾ ವಿನುತಾ,ಡಾ ಸುಮಾ ಕಲ್ಯಾಣಿ ದಂತ ತಪಾಸಣೆ ನಡೆಸಿದರು.

ಅಮ್ಮಾಸೇವಾಸಂಸ್ಥೆಯಅಧ್ಯಕ್ಷಎಮ್‌ಎಸ್‌ಪಾಟೀಲ, ಗೌರವಾಧ್ಯಕ್ಷ ಸಜ್ಜನರಾಜ ಮೆಹತಾ, ಕಾರ್ಯದರ್ಶಿ ಟಿ ಎನ್ ರಾಮದುರ್ಗ ಸೇರಿದಂತೆ ಶಿಬಿರ ದಲ್ಲಿ ವೈದ್ಯೆ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

**ವರದಿ : ಕೆ ಎಚ್ ಸೋಲಾಪೂರ**

# ಏ.11ರಂದು ಮಂತ್ರಾಲಯದಲ್ಲಿ ರಾಧಾಕೃಷ್ಣರ ಕಲರವ ಕೃಷ್ಣ ಲೀಲಾ ಅಮೃತ ಕಾರ್ಯಕ್ರಮ

**ಇಳಕಲ್ :** ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿ ಮಠ ಹಾಗೂ ಹಾಸನ ಜಿಲ್ಲೆ ಚನ್ನರಾಯಪಟ್ಟಣದ ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಶ್ರೀ ಕೃಷ್ಣ ಲೀಲಾ ಅಮೃತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ

ಭಾರತೀಯ ಸಂಸ್ಕೃತಿಯ ಕಲೆಯಲ್ಲಿರುವ 8 ವಿಧದ ಶಾಸ್ತ್ರೀಯ ನೃತ್ಯಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಆಧ್ಯಾತ್ಮಿಕವಾಗಿ ಭಗವಂತನ ರೂಪವನ್ನು ವಿಶೇಷ ನೃತ್ಯಗಳ ಮೂಲಕ ಕ್ಷೇತ್ರಗಳಲ್ಲಿ ಮಾಡುವ ನಿಟ್ಟಿನಲ್ಲಿ ಭಾರತ ದೇಶಾದ್ಯಂತ ಹಲವಾರು ಭಗವಂತನ ಶ್ರೀ ಕ್ಷೇತ್ರಗಳಲ್ಲಿ ನೃತ್ಯೋತ್ಸವ ಕಾರ್ಯಕ್ರಮಗಳ ಆಯೋಜನೆ ಮಾಡಿ 15000 ಕಲಾವಿದರಿಗೆ ವೇದಿಕೆಯನ್ನು ನೃತ್ಯ ಅಕಾಡೆಮಿ ಪೋಷಕರು ಹಾಗು ಕಲಾವಿದರ ಸಹಕಾರದ ಮೂಲಕ ಕಾರ್ಯಕ್ರಮದ ಯಶಸ್ವಿಯ ಹಾದಿಯಲ್ಲಿ. ಏಪ್ರಿಲ್ 11ರಂದು ಸಂಜೆ 4 ಗಂಟೆಗೆ ದೇಶ



ವಿದೇಶಗಳಿಂದ ಆಗಮಿಸುತ್ತಿರುವ 4 ವರ್ಷದ ಮಗುವಿನಿಂದ 60 ವರ್ಷದ ವಯಸ್ಸಿನ 150 ಕ್ಕು ಹೆಚ್ಚು ಕಲಾವಿದರು ನೊಳಗೊಂಡು ರಾಧಾಕೃಷ್ಣರ ವೇಷ ಭೂಷಣದಲ್ಲಿ ಶ್ರೀ ಕೃಷ್ಣ ಲೀಲಾ ಅಮೃತ ವಿಶೇಷ ನೃತ್ಯ ಕಾರ್ಯಕ್ರಮವು ಪಕ್ಕ ವಾದ್ಯದೊಂದಿಗೆ ನಡೆಯುತ್ತಿರುವ ಈ ಕಾರ್ಯಕ್ರಮದ ಬಗ್ಗೆ ಪೀಠಾಧಿಪತಿಗಳಾದಪರಮಪೂಜ್ಯ ಡಾ ಶ್ರೀ ಶ್ರೀ ಸುಭುದೇಂದ್ರ ತೀರ್ಥ ಮಹಾ ಸ್ವಾಮೀಜಿಯವರು ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಬಿಡುಗ–'ಡೆಗೊಳಿಸಿ ಭಾಗವಹಿಸುತ್ತಿರುವ ಎಲ್ಲಾ ಕಲಾವಿದರಿಗೆ ತಮ್ಮ ಆಶೀರ್ವಾದವನ್ನು ಮಾಡುವ ಮೂಲಕ ಮಂತ್ರಾಲಯಕ್ಕೆ ಆಹ್ವಾನಿಸಿದ್ದಾರೆ ಹಾಗು ಮೊಟ್ಟಮೊದಲ ಬಾರಿಗೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷಸ್ಥಾನಮಾನಹೊಂದಿರುವ ಶಾಸ್ತ್ರೀಯನೃತ್ಯಕ್ಕೆಮಂತ್ರಾಲಯದ ಪೀಠಾಧಿಪತಿಗಳಾದಪರಮಪೂಜ್ಯ ಡಾ ಶ್ರೀ ಶ್ರೀ ಸುಭುದೇಂದ್ರ ತೀರ್ಥ ಮಹಾ ಸ್ವಾಮೀಜಿಯವರ ಅಮೃತ ಹಸ್ತದಿಂದ ಪಕ್ಕ ವಾದ್ಯವನ್ನು ನುಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಹಾಗು ಈ ಕಾರ್ಯಕ್ರಮವನ್ನು ಪೀಠಾಧಿ ಪತಿಗಳಾದ ಪರಮಪೂಜ್ಯ ಡಾ ಶ್ರೀ ಶ್ರೀ ಸುಭುದೇಂದ್ರ ತೀರ್ಥ ಮಹಾ ಸ್ವಾಮೀಜಿಯವರ ವರ್ದಂತಿ ಸಂದರ್ಭವಾಗಿ ಸಮರ್ಪಣೆ ಮಾಡುತ್ತಿದ್ದೇವೆ ಎಂದು ಕಾರ್ಯಕ್ರಮದ ಆಯೋಜನ ಕಾರ್ಯದರ್ಶಿ ಗಿನ್ನಿಸ್ ದಾಖಲೆ ಭರತನಾಟ್ಯ ಕಲಾವಿದೆ ಮಂತ್ರಾಲಯದ ಪರಿಮಳ ಪ್ರಶಸ್ತಿ ಪುರಸ್ಕೃತೆ ರಾಜ್ಯ ಪ್ರಶಸ್ತಿ ವಿಜೇತ ವಿದೂಷಿ ಡಾ. ಸ್ವಾತಿ ಪಿ ಭಾರದ್ವಾಜ್ ಅಧ್ಯಕ್ಷರಾದ ಶ್ರೀಮತಿ ಅನಿತಾ ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಮನಾಮ ಸ್ಮರಣೆಯಿಂದ ಬದುಕಿನಲ್ಲಿ ನೆಮ್ಮದಿ: ಮಾತಾಜೀ ತ್ಯಾಗಮಯೀ ಅಭಿಮತ

**ಸಿಹಿ ಕಹಿ ಸುದ್ದಿ,**

**ಚಳ್ಳಕೆರೆ :** ಸದಾ ರಾಮನಾಮ ಸ್ಮರಣೆಯಿಂದ ಬದುಕಿನಲ್ಲಿ ನೆಮ್ಮದಿ ಸಿಗುತ್ತದೆ ಎಂದು ಚಳ್ಳಕೆರೆಯ ಶ್ರೀಶಾರದಾಶ್ರಮದ ಅಧ್ಯಕ್ಷರಾದ ಮಾತಾಜೀ ತ್ಯಾಗಮಯೀ ಅಭಿಪ್ರಾಯ ಪಟ್ಟರು. ಶಿವ ನಗರದ ನೂತನ ಶ್ರೀಮಹಾಲಕ್ಷ್ಮೀ ದೇವಸ್ಥಾನದ ಸನ್ನಿಧಿಯಲ್ಲಿ ಆಯೋಜಿಸಿದ್ದ ವಿಶೇಷ ಸತ್ಸಂಗ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಶ್ರೀರಾಮನ ಬಗ್ಗೆ ವಿಶೇಷ ಪ್ರವಚನ ನೀಡಿದರು. ರಾಮ ನಾಮ ತಾರಕ ಮಂತ್ರವಾಗಿದ್ದು ಅದರ ನಿತ್ಯ ಸ್ಮರಣೆ ಮತ್ತು ಚಿಂತನೆಯಿಂದ ಜೀವನಕ್ಕೆ ಸಾರ್ಥಕತೆ ಸಿಗುತ್ತದೆ. ಆದ್ದರಿಂದ ಕ್ಷಣಿಕ ಸುಖಕ್ಕಾಗಿ ಆಸೆ ಪಡದೆ ಶಾಶ್ವತ ಸುಖಕ್ಕಾಗಿ ಆತೊ–



ರೆಯ ಬೇಕು. ಸಾರ್ಥಕ ಬದುಕಿನ ಎಲ್ಲಾ ಮೌಲ್ಯಗಳನ್ನು ರಾಮಾಯಣ ಗ್ರಂಥ ಒಳ ಗೊಂಡಿದೆ. ಇಂದಿನ ಯುವ ಪೀಳಿಗೆ ಇಂತಹ ಮಹಾ ಕಾವ್ಯಗಳನ್ನು ಓದುವ ಮತ್ತು ಶ್ರವಣ ಮಾಡುವ ಹವ್ಯಾಸವನ್ನು ಬೆಳೆಸಿ ಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಈ ಸತ್ಸಂಗದ ಪ್ರಯುಕ್ತ ಶ್ರೀಶಾರದಾಶ್ರಮದ ಸದ್ಭಕ್ತರಿಂದ ಸಾಮೂಹಿಕ "ಶ್ರೀಲಲಿತಾ ಸಹಸ್ರನಾಮ" ಮತ್ತು "ಶ್ರೀದೇವಿಸ್ತುತಿ" ಪಠಣ, ವಿಶೇಷ ಭಜನೆ ಹಾಗೂ ಪ್ರಸಾದ ವಿನಿಯೋಗ ನಡೆಯಿತು. ಈ ಸತ್ಸಂಗ ಕಾರ್ಯಕ್ರಮದಲ್ಲಿ ಟಿ.ಪ್ರಭುದೇವ, ಕುಮಾರ್, ಶ್ರೀಮತಿ ಬಿ.ಸುಮನ ಕೋಟೇಶ್ವರ, ನಯನ ನಾಗರಾಜ್, ಜ್ಯೋತಿ ಸತೀಶ್, ಪುಷ್ಪ ಸಂಜೀವ ಮೂರ್ತಿ, ಸತ್ಯನಾರಾಯಣ ಗುಪ್ತ, ನಳಿನ ಹರಿಕೃಷ್ಣ, ಜಿ.ಯಶೋಧಾ ಪ್ರಕಾಶ್, ನೇತಾಜಿ ಪ್ರಸನ್ನ, ಜಯಪಾಲ,ಕೆ.ಎಂವೇದಾಚಾರ್,ಮೀನಾಕ್ಷಿ ಮಂಜುನಾಥ, ಸರೋಜಮ್ಮ, ಚಂದ್ರಕಲಾ, ಮಾಣಿಕ್ಯಮ್ಮ, ಯತೀಶ್ ಎಂ ಸಿದ್ದಾಪುರ, ಶುಭ ಸೋಮಶೇಖರ್,ತಿಪ್ಪಮ್ಮ,ಮೋಹಿನಿ, ವನಜಾಕ್ಷಿ, ಅಂಬುಜಾ ಶಾಂತಕುಮಾರ್, ಗೀತಾ ನಾಗರಾಜ್, ಮಂಜುಳಮ್ಮ, ಗೀತಾ ವೆಂಕಟೇಶರೆಡ್ಡಿ, ಚೇತನ್ ಟಿ.ಎಂ ವಿಜಯಕಲಾ, ಲಕ್ಷ್ಮೀದೇವಮ್ಮ, ಚೇತನ್, ರಶ್ಮಿ ರಮೇಶ್, ಲೀಲಾವತಿ ಸೇರಿದಂತೆ ಶ್ರೀಶಾರದಾಶ್ರಮ ಮತ್ತು ಶ್ರೀಮಹಾಲಕ್ಷ್ಮೀ ದೇವಸ್ಥಾನದ ಸದ್ಭಕ್ತರು ಭಾಗವಹಿಸಿದ್ದರು.

**ವರದಿ–ಯತೀಶ್.ಎಂ ಸಿದ್ದಾಪುರ, ಚಳ್ಳಕೆರೆ.**

# ವೃತ್ತಿಯ ಜೊತೆಗೆ ಕುಟುಂಬದ ಯೋಗಕ್ಷೇಮಕ್ಕೂ ಆದ್ಯತೆ ಇರಲಿ

**ಧಾರವಾಡ :** ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವುದು ನಮ್ಮ ಹೆಮ್ಮೆ. ಅದರೊಂದಿಗೆ ನಮ್ಮ ಕುಟುಂಬಕ್ಕೂ ಆದ್ಯತೆ ನೀಡಬೇಕು. ಕುಟುಂಬ ಸದಸ್ಯರ ಆರೋಗ್ಯ, ಶಿಕ್ಷಣಗಳಿಗೆ ಮಹತ್ವ ನೀಡಬೇಕು ಎಂದು ನಿವೃತ್ತ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಶಂಕರ ರಾಗಿ ಅವರು ಹೇಳಿದರು.

ಅವರು ಜಿಲ್ಲಾ ಪೊಲೀಸ್ ಇಲಾಖೆಯಿಂದ ನಗರದ ಮೀಸಲು ಪೊಲೀಸ್ ಪಡೆಯ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಮತ್ತು ನಿವೃತ್ತ ಅಧಿಕಾರಿಗಳಿಗೆ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದರು.

ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಾರೆ. ಅವರ ಸೇವೆಗೆ ತಕ್ಕ ಸೌಲಭ್ಯಗಳು ಸಿಗಬೇಕು. ಸರಕಾರ ಪೊಲೀಸರ ಸಮಸ್ಯೆಗಳಿಗೆ, ಮೂಲಸೌಕರ್ಯಗಳಿಗೆ ಕಿವಿ ಆಗಬೇಕು ಎಂದರು.

ನಮ್ಮನ್ನು ನಂಬಿರುವ ನಮ್ಮ ಕುಟುಂಬಕ್ಕೂ ನ್ಯಾಯ ಸಿಗುವಂತೆ ನಾವು ಗಮನ ಹರಿಸಬೇಕು. ಸೇವಾ ನಿವೃತ್ತಿ ನಂತರ ನಮ್ಮ ಯೋಗಕ್ಷೇಮ ನೋಡಿಕೊಳ್ಳುವವರು ನಮ್ಮ ಕುಟುಂಬದವರು. ಆದ್ದರಿಂದ ಅವರಿಗೂ ಗಮನ ನೀಡಬೇಕು ಎಂದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಗೋಪಾಲ ಎಂ.ಬ್ಯಾಕೋಡ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ, ಪೊಲೀಸ್



ಕಲ್ಯಾಣ ನಿಧಿಯ ವರದಿ ವಾಚಿಸಿದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎನ್.ವ್ಹಿ.ಬರಮನಿ ಅವರು ವಂದಿಸಿದರು.

ಕೆ.ಎಸ್.ಐ.ಎಫ್.ಸಿ. ಕಮಾಂಡೆಂಟ್ ಗಣೇಶ ಹಾಗೂ ಉಪ ಪೊಲೀಸ್ ಅಧೀಕ್ಷಕ ಎಸ್.ಎಂ.ನಾಗರಾಜ ಅವರು ವೇದಿಕೆಯಲ್ಲಿದ್ದರು. ಜಿಲ್ಲಾ ಮೀಸಲು ಪೊಲೀಸ್ ಪಡೆಯ ಎ.ಆರ್.ಎಸ್.ಐ ಗಳಾದ ಎ.ಎಫ್. ಜಿಲ್ಲೇನವರ ಹಾಗೂ ವೈ.ಎಂ.ದಿಡ್ಡಮನಿ ಅವರು ಕಾರ್ಯಕ್ರಮ ನಿರೂಪಿಸಿದರು.

ತಂಡಗಳ ಪರಿವೀಕ್ಷಣೆ: ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ನಿವೃತ್ತ ಲೋಕಾಯುಕ್ತ ಎಸ್.ಪಿ.ಶಂಕರ ರಾಗಿ ಅವರು ಪರೇಡ್ ಕಮಾಂಡರ್ ಎಫ್. ಆರ್.ಡೊಕ್ಕಣ್ಣವರ ಸಹಾಯದಲ್ಲಿ ತೆರೆದ ಜೀಪ್‌ದಲ್ಲಿ ವಿವಿಧ ಪರೇಡ್ ತಂಡಗಳ ವಿಕ್ಷಣೆ ಮಾಡಿ, ಗೌರವ ಸ್ವಿಕರಿಸಿದರು.

ಪೊಲೀಸ್ ಪಥಸಂಚಲನ: ಪರೇಡ್ ಕಮಾಂಡರ್ಗಳಾದ ಎಫ್.ಆರ್.ಡೊಕ್ಕಣ್ಣವರ ಹಾಗೂ ಆರ್.ಎಸ್.ಗುಡನಟ್ಟಿ ಅವರ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳಾದ ಜಿಲ್ಲಾ ಮೀಸಲು ಪೊಲೀಸ್ ಪಡೆಯ ಆರ್.ಎಸ್.ಐ. ಸತೀಶ ಠಕ್ಕಳಕಿ, ಮಂಜುನಾಥ ಕುರಗೋಡ, ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯ ಬಸನಗೌಡ ಬಿ.ಎಂ., ಜಿಲ್ಲಾ ನಿಯಂತ್ರಣ (ನಿಸ್ತಂತು) ಕೊಠಡಿಯ ಪಿ.ಎಸ್.ಐ ಉಮೇಶ ಕಮತಿ, ಗುಡಗೇರಿ ಪೊಲೀಸ್ ಠಾಣೆಯ ಪಿಎಸ್ಐ ಮಂಜುಳಾ ಸದಾರಿಯವರ ಮತ್ತು ಆರ್.ಎಸ್.ಐ ಕೆ.ಎಫ್.ಹದ್ದಣ್ಣವರ ಆಕರ್ಷಕವಾದ ನಿಧಾನಗತಿಯ ಮತ್ತು ತ್ವರೀತಗತಿಯ ಪಥ ಸಂಚಲನದ ಮೂಲಕ ಗೌರವ ಸಲ್ಲಿಸಿದರು.

ಜಿಲ್ಲಾ ಮೀಸಲು ಪೊಲೀಸ್ ಪಡೆಯ ಎ.ಆರ್.ಎಸ್.ಐ. ವೈ.ಎಫ್.ಭಜಂತ್ರಿ ಅವರ ನೇತೃತ್ವದ ಜಿಲ್ಲಾ ಪೊಲೀಸ್ ಬ್ಯಾಂಡ್ ತಂಡವು ಸ್ಟಿಕ್ ಮೇಜರ್ ಸಾಗರ ಬಸರಕೊಡಿ ಅವರ ಸಹಾಯದಲ್ಲಿ ಅತ್ಯುತ್ತಮವಾಗಿ ಬ್ಯಾಂಡ್ ನುಡಿಸಿದರು.

ಪೊಲೀಸ್ ಅಧಿಕಾರಿ ಜಿ.ಎಲ್. ಜುಂಜೂರಿ ಅವರ ಬೆಂಗಾವಲಿನಲ್ಲಿ ವ್ಹಿ.ಡಿ.ಕುರಗೋವಿನಕೊಪ್ಪ ಅವರು ರಾಷ್ಟ್ರಧ್ವಜವನ್ನು ಮತ್ತು ಎಸ್.ಆರ್. ಕರಿಕಟ್ಟಿ ಅವರು ಪೊಲೀಸ್ ಧ್ವಜದೊಂದಿಗೆ ಆಗಮಿಸಿದ್ದರು, ಧ್ವಜಗಳಿಗೆ ಗೌರವ ಸಲ್ಲಿಸಲಾಯಿತು.

ಸೇವಾ ನಿವೃತ್ತರಿಗೆ ಗೌರವ ಸಮರ್ಪಣೆ: ಪೊಲೀಸ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ವಿವಿದ ಅಧಿಕಾರಿ ಮತ್ತು ಸಿಬ್ಬಂದಿಗಳಾದ ಎಚ್.ಜಿ.ತಳವಾರ, ಶ್ರೀಮತಿ ಎನ್.ವೈ.ಗೊಂದಳಿ, ಎ.ಜಿ.ಹವಗಿ, ಕೆ.ಎಚ್.ಕರ್ಜಗಿ, ಶ್ರೀಮತಿ ಎಸ್.ಕೆ. ನಾಗನಗೌಡರ, ಆರ್.ಜೆ.ಪಂಗಳೇರ, ಎಲ್. ಎಸ್.ಮುತ್ತಿನ, ಎ.ಎಂ.ಅಂಬಿಗೇರ, ಆರ್. ಎನ್.ಗೋರಗುದ್ದಿ, ವ್ಹಿ.ಎಸ್. ಬೆಳಗಾಂಕರ, ಶ್ರೀಮತಿ ಚಾಮುಂಡೇಶ್ವರಿ, ಎಂ.ಎಸ್. ಅಂಚಿ, ಎಂ.ಎ.ಗೋಲಂದಾಜ, ಬಿ.ಎಸ್. ಹುಬ್ಬಳ್ಳಿ ಮತ್ತು ಬಿ.ಎಂ. ಮಡಿವಾಳರ ಅವರನ್ನು ಮುಖ್ಯ ಅತಿಥಿಗಳೊಂದಿಗೆ ಎಸ್.ಪಿ. ಡಾ.ಗೋಪಾಲ ಬ್ಯಾಕೋಡ, ಎಎಸ್ ಪಿ ಎನ್.ವ್ಹಿ.ಬರಮಣಿ ಅವರು ಸನ್ಮಾನಿಸಿ, ಗೌರವಿಸಿದರು.

ಕಾರ್ಯಕ್ರಮದಲ್ಲಿ ಧಾರವಾಡ ಜಿಲ್ಲೆಯ ಎಲ್ಲ ಪೊಲೀಸ್‌ಠಾಣೆಗಳಅಧಿಕಾರಿ,ಸಿಬ್ಬಂದಿಗಳು, ಎಸ್.ಪಿ.ಕಚೇರಿಯ ಅಧಿಕಾರಿ ಸಿಬ್ಬಂದಿಗಳು, ನಿವೃತ್ತ ಪೊಲೀಸ್ ಅಧಿಕಾರಿಗಳು, ಪೊಲೀಸ್ ಕುಟುಂಬಗಳ ಸದಸ್ಯರು ಸಾರ್ವಜನಿಕರು ಭಾಗವಹಿಸಿದ್ದರು.

# ಆಧ್ಯಾತ್ಮಿಕ ಜ್ಞಾನವನ್ನು ನೀಡಿದ ರಾಷ್ಟ್ರ ನಮ್ಮ ಭಾರತ




**ಧಾರವಾಡ :** ಭಾರತ ದೇಶ ಪ್ರಪಂಚದಲ್ಲಿ ಒಂದು ಶ್ರೇಷ್ಠವಾದ ದೇಶ. ನಮ್ಮಲ್ಲಿ ಶ್ರೇಷ್ಠರಾದ ಶರಣರು, ವಚನಕಾರರು ಇದ್ದಾರೆ. ಇಡೀ ವಿಶ್ವಕ್ಕೆ ಆಧ್ಯಾತ್ಮಿಕ ಜ್ಞಾನವನ್ನು ನೀಡಿದ ರಾಷ್ಟ್ರ ನಮ್ಮ ಭಾರತ ದೇಶವಾಗಿದೆ ಎಂದು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕೀರ್ ಸನದಿ ಅವರು ಹೇಳಿದರು.

ಅವರು ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಜರುಗಿದ ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯನವರ ಜ್ಞಾನ, ಅವರ ವಚನಗಳು ಪ್ರತಿಯೊಬ್ಬರ ಮನೆಮನೆಗೂ ಮುಟ್ಟುವ ವ್ಯವಸ್ಥೆ ಆಗಬೇಕು. ಈ ತರಹದ ಶರಣರನ್ನು ನಾವು ಕೇವಲ ಈ ಒಂದು ದಿನಕ್ಕೆ ಮಾತ್ರ ಸೀಮಿತವಾಗಿ ನೋಡಬಾರದು ಎಂದು ಹೇಳಿದರು.

ಧಾರವಾಡ ಜಿಲ್ಲಾ ದೇವಾಂಗ ಸಂಘ ಅಧ್ಯಕ್ಷ ಡಾ. ಕೆ.ಜಿ. ಬ್ಯಾಕೋಡಿ ಅವರು ಮಾತನಾಡಿ, 10 ನೇ ಶತಮಾನದಲ್ಲಿ ನಮ್ಮ ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯನವರು ಅವರು ಆದ ನಂತರ ಸಾಕಷ್ಟು ಶರಣರು ಬಂದಿದ್ದಾರೆ. ಬಸವಣ್ಣವರು ಕೂಡ ಬಂದಿದ್ದಾರೆ.

ಬಸವಣ್ಣನವರು ವಚನಗಳನ್ನು ಅತ್ಯಂತ ಸರಳ ಭಾ?ಯಲ್ಲಿ ಬರೆದಿದ್ದಾರೆ. ಆದರೆ ದೇವರ ದಾಸಿಮಯ್ಯನವರ ವಚನ ಹೇಗೆ ಎಂದರೆ ಕನ್ನಡ, ಹಳಗನ್ನಡ ಬಗ್ಗೆ ಜ್ಞಾನವಿದ್ದರೆ ಮಾತ್ರ ಅದು ತಿಳಿಯುತ್ತದೆ. ಕೇವಲ ಓದಿದರೆ ಅದು ತಿಳಿಯುವುದಿಲ್ಲ, ಆ ವಚನಗಳಿಗೆ ಅಷ್ಟು ಶಕ್ತಿ ಇದೆ ಎಂದು ಹೇಳಿದರು.

ಜಗದೀಶ ಜವಳಿ ಅವರು ಮಾತನಾಡಿ, ದಾಸಿಮಯ್ಯನವರ ಆಧುನಿಕತೆ ಮತ್ತು ಪ್ರಭಾವವು ನಮ್ಮ ಇಂದಿನ ಸಮಾಜದಲ್ಲೂ ಪ್ರಸ್ತುತವಾಗಿವೆ. ಜಾತಿ–ಮತ ಭೇದ, ಅಸಹಿಷ್ಣುತೆ, ಮತ್ತು ಅಸಮಾನತೆಯನ್ನು ನಿವಾರಿಸಲು ಅವರ ಸಂದೇಶಗಳು ನಮಗೆ ಪಾಠವಾಗಬೇಕು.

ಶ್ರಮ ಮತ್ತು ಪ್ರಾಮಾಣಿಕತೆಯಿಂದ ಬದುಕಿದರೆ ದೇವರ ಅನುಗ್ರಹ ದೊರೆಯುತ್ತದೆ ಎಂಬ ಅವರ ತತ್ವ ಸದಾ ಪ್ರೇರಣಾದಾಯಕವಾಗಿದೆ ಎಂದು ಹೇಳಿದರು.

ರಾಣೆಬೆನ್ನೂರ ನಿವೃತ್ತ ಪ್ರೌಢಶಾಲಾ ಶಿಕ್ಷಕ ಎಸ್. ಕೆ.ದುರ್ಗದಸೀಮಿ ಅವರು ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯ ಅವರ ಜೀವನ ಚರಿತ್ರೆ ಕುರಿತು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಈರಣ್ಣ ಇಂಜಿನಗೇರಿ ಅವರು ಕಾರ್ಯಕ್ರಮ ನಿರೂಪಿಸಿದರು. ರವಿ ಡೊಳ್ಳಿ ಅವರು ವಂದಿಸಿದರು.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರ ಅಜಿತ್ ದೇಸಾಯಿ, ಧಾರವಾಡ ದೇವಾಂಗ ಸಂಘ ಅಧ್ಯಕ್ಷ ವಿನೋದ ಹುಲಿಮನಿ, ಬೆಂಗಳೂರು ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರ ಪಾಟೀಲ, ಧಾರವಾಡ ದೇವಾಂಗ ನೇಕಾರ ಅಭಿವೃದ್ಧಿ ಸಂಘದ ಅಧ್ಯಕ್ಷ ರವಿ ಲೋಲೆ, ಬನಶಂಕರಿ ದೇವಾಂಗ ಸಂಘದ ಅಧ್ಯಕ್ಷ ಬಸವರಾಜ ಕೊಂಗಿ, ಬಸವರಾಜ ಕುಸುಬಿ, ಸಮಾಜದ ಮುಖಂಡ ರಾಮು ತಾರೆನ್ನವರ ಮತ್ತು ಉಪ್ಪಿನ ಬೆಟಗೇರಿ ಸಮಾಜದ ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಮುದಾಯದ ಗುರು ಹಿರಿಯರು, ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ವಿಶೇಷ ಚೇತನರ ಅನುದಾನದಲ್ಲಿ ಫ್ಯಾನ್ ವಿತರಣೆ

**ಕುಂದಗೋಳ :** ವಿಶೇಷ ಚೇತನರ ಅನುದಾನದಲ್ಲಿ 2 ಲಕ್ಷ 50 ಸಾ.ರೂ. ವೆಚ್ಚದಲ್ಲಿ ವಿಶೇಷ ಚೇತನರಿಗಾಗಿ 250 ಫ್ಯಾನ್ ವಿತರಿಸಲಾಗುತ್ತಿದೆ ಎಂದು ಸಂಶಿ ಗ್ರಾ ಪಂ ಅಧ್ಯಕ್ಷ ರಾಜು ಪುಟ್ಟಣ್ಣವರ ಹೇಳಿದರು.

ಕುಂದಗೋಳ ತಾಲೂಕಿನ ಸಂಶಿ ಗ್ರಾಮದ ನಂ1 ಶಾಲಾವರಣದಲ್ಲಿ ಗ್ರಾಪಂ ವತಿಯಿಂದ ಹಮ್ಮಿಕೊಂಡಿದ್ದ ಫ್ಯಾನ್ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ನಮ್ಮ ಪಂಚಾಯಿತಿಯಿಂದ ವಿಶೇಷ ಚೇತನರಿಗೆ ಅವರ ಅನುದಾನದಲ್ಲಿ ಪ್ರತಿ ವರ್ಷ ಒಂದೊಂದು ಕೊಡುಗೆ ನೀಡುತ್ತಿದ್ದು, ಪ್ರಥಮ ವರ್ಷದಲ್ಲಿ ಕುಕ್ಕರ್, ಎರಡನೇ ವರ್ಷದಲ್ಲಿ ಹೊಲಿಗೆ ಯಂತ್ರ



ಮತ್ತು ಈ ವರ್ಷದ ಬೇಸಿಗೆಯಲ್ಲಿ ಫ್ಯಾನ್ ನೀಡುತ್ತಿದ್ದೇವೆ. ಗ್ರಾಮದ ಪ್ರತಿ ವಿಶೇಷ ಚೇತನರಿಗೆ ನಾವು ಪ್ರಯತ್ನಿಸುತ್ತಿದ್ದು ಈ ಸೌಲಭ್ಯ ಮುಟ್ಟಿಸಲು ವಿಶೇಷ ಚೇತನರು ಇದರ ಸದುಪಯೋಗ ಪಡೆದುಕೊಳ್ಳಲಿ ಎಂದು ತಿಳಿಸಿದರು. ಅವರು ಮುಂದುವರೆದು ಮಾತನಾಡುತ್ತ ಈಗಾಗಲೇನಮ್ಮಗ್ರಾಮದಲ್ಲಿನಮ್ಮ ಪಂಚಾಯಿತಿ ಸಹಕಾರದಿಂದ ರುಡಸೆಟ್ ಸಂಸ್ಥೆ ಯಿಂದ ವಿವಿಧ ತರಬೇತಿಗಳು ಜರುತ್ತಿದ್ದು ಯುವಕ–ಯುವತಿಯರು ಇದರ ಪ್ರಯೋಜನ ಪಡೆದುಕೊಳ್ಳಿ ಎಂದು ಕರೆ ನೀಡಿದರು.

ಉಪಾಧ್ಯಕ್ಷ ಗೌರಮ್ಮ ಹರಕುಣಿ, ಸದಸ್ಯರಾದ ಇರ್ಷಾದ್ ಮುಲ್ಲಾ, ಹನಮಂತಪ್ಪಲಕ್ಷ್ಮೇಶ್ವರ,ಶಂಕರಪ್ಪ ಬೆಳ್ಳಟ್ಟಿ, ಗಿರೀಶಗೌಡ ಪಾಟೀಲ, ದೇವಪ್ಪ ಮೊರೋಪಂತರ ಹಾಗೂ ಗ್ರಾಮದ ಮುಖಂಡರು ಮತ್ತು ಅನೇಕ ಮಹಿಳಾ ಸದಸ್ಯಣಿಯರಿದ್ದರು.

# ‘ಮಕ್ಕಳೇ ಬಂಗಾರ’ ಕೃತಿ ಲೋಕಾರ್ಪಣೆ

**ರಬಕವಿ :** ಮಕ್ಕಳ ಸಾಹಿತ್ಯವನ್ನು ರಚಿಸಿ, ಅದರ ಬೆಳವಣಿಗೆಗೆ ಮಹಾಲಿಂಗಪುರದದ ಅಣ್ಣಾಜಿ ಫಡತಾರೆಯವರು ನಿರಂತರ ಕಾರ್ಯ ಮಾಡುತ್ತಿದ್ದಾರೆ. ಮಕ್ಕಳಲ್ಲಿ ಮೌಲ್ಯಗಳನ್ನುಬಿತ್ತುವಕವಿತೆಗಳನ್ನುಬರೆದು ಹೆಸರಾಗಿರುವರು ಎಂದು ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು.

ಅವರು ರಬಕವಿಯ ದಾನಮ್ಮದೇವಿ ದೇವಸ್ಥಾನದ ಸಭಾ ಭವನದಲ್ಲಿ ಕಸಾಪ ಜಿಲ್ಲಾ, ತಾಲ್ಲೂಕು, ವಲಯಗಳು, ನಿವೃತ್ತ ನೌಕರರ ಸಂಘ, ದೇವಸ್ಥಾನ ಟ್ರಸ್ಟ್ ಕಮಿಟಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕವಿಗೋಷ್ಠಿಯಲ್ಲಿ ಶಿಶುಪ್ರಾಸಗಳ ಚೌಪದಿ ಸಂಕಲನ ಲೋಕಾರ್ಪಣೆ ಮಾಡಿ ಮಕ್ಕಳಲ್ಲಿ ಸಾಹಿತ್ಯದ ರುಚಿ ಬೆಳೆಸುವುದು ಅಗತ್ಯವಿದೆ ಎಂದರು.

ಹಿರಿಯಸಾಹಿತಿಬಿ.ಆರ್.ಪೊಲೀಸಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಮಕ್ಕಳ ಸಾಹಿತಿ ಅಣ್ಣಾಜಿ ಫಡತಾರೆ ಮಾತನಾಡಿ, ಮಕ್ಕಳಾಗಿ ಮಕ್ಕಳ ಸಾಹಿತ್ಯ ರಚಿಸಬೇಕು. ಮನರಂಜಿಸುವ ಶಿಕ್ಷಕರು, ಯುವ ಬರಹಗಾರರು ಮಕ್ಕಳು ಹಾಡಲು ಬರುವಂತಹ ಶಿಶು ಗೀತೆಗಳನ್ನು ರಚಿಸಬೇಕೆಂದು ತಿಳಿಸಿದರು.

ತಾಲ್ಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ.




ಕೃ. ಮೇಗಾಡಿ ಮಾತನಾಡಿ, ಎಪ್ರೀಲ್ 13 ರಂದು ಬನಹಟ್ಟಿಯಲ್ಲಿ 40 ನೇ ಪುಸ್ತಕಾವಲೋಕನ ಕಾರ್ಯಕ್ರಮ ನೆರವೇರಲಿದೆ ಎಂದರು. ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವ ಕಾರ್ಯ ನಡೆದಿದೆ. ನಾಡು ನುಡಿ ತೇರನ್ನು ಎಲ್ಲರೂ ಕೂಡಿ ಎಳೆಯೋಣ ಎಂದರು.

ಹಿರಿಯ ಸಾಹಿತಿ ಜಿ. ಎಸ್. ವಡಗಾಂವಿ ಮಾತನಾಡಿದರು.

ಸಾಹಿತಿಗಳಾದ ಶಿವಾನಂದ ದಾಶಾಳ, ಎಂ. ಎಸ್. ಬದಾಮಿ, ಶಿವಾನಂದ ಬಾಗಲಕೋಟಮಠ,

ದಾಕ್ಷಾಯಣಿ ಮಂಡಿ, ಕಸಾಪ ಮಹಾಲಿಂಗಪುರ ವಲಯ ಅಧ್ಯಕ್ಷ ಬಸವರಾಜ ಮೇಟಿ, ತೇರದಾಳ ವಲಯ ಅಧ್ಯಕ್ಷ ಗಂಗಾಧರ ಮೋಪಗಾರ, ಶಿವಜಾತ ಉಮದಿ, ವಾಣಿಶ್ರೀ ಹೂಲಿ, ದಾನಪ್ಪ ಆಸಂಗಿ, ಮಹಾಶಾಂತ ಶೆಟ್ಟಿ, ಮಲ್ಲೇಶಪ್ಪ ಕುಚನೂರ, ಡಾ. ರವಿ ಜಮಖಂಡಿ, ಡಾ. ಜಿ. ಎಚ್. ಚಿತ್ತರಗಿ, ದಾನಪ್ಪ ಆಸಂಗಿ, ಮಹೇಶ ಮನ್ನಯ್ಯನವರಮಠ, ಬಸವರಾಜ ಬಾಳಿಕಾಯಿ, ಬಿ. ಎಂ. ಮಾಳೇದ, ಮಾಲಾ ಬಾವಲತ್ತಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

ಗೌರವ ಕಾರ್ಯದರ್ಶಿ ಶ್ರೀಶೈಲ ಬುರ್ಲಿ ಸೊಗಸಾಗಿ ನಿರೂಪಿಸಿದರು. ದಾನಪ್ಪ ಆಸಂಗಿ ವಂದಿಸಿದರು.

# ಹುಟ್ಟೂರಿನಹಿರಿಮೆಹೆಚ್ಚಿಸಿದಪೊಲೀಸ್‌ಅಧಿಕಾರಿ ಮುಖ್ಯಮಂತ್ರಿ ಪದಕ ಪಡೆದ ಭರತೇಶ ವೆಂಟಕಾಪುರ

**ತೇರದಾಳ :** ಬಡತನದಲ್ಲಿ ಜನಿಸಿ ಬದುಕಿನಲ್ಲಿ ಸಾಕಷ್ಟು ಏಳು ಬೀಳುಗಳನ್ನು ಕಂಡು ಪೊಲೀಸ್ ಅಧಿಕಾರಿಯಾಗಿ ನೇಮಕಗೊಂಡಿರುವ ಸಮೀಪದ ಹಳಿಂಗಳಿ ಗ್ರಾಮದ ಭರತೇಶ ವೆಂಕಟಾಪುರ ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆಯುವ ಮೂಲಕ ಹುಟ್ಟೂರಿನ ಹಿರಿಮೆ ಹೆಚ್ಚಿಸಿದ್ದಾರೆ.



ರೈತಾಪಿ ಕುಟುಂಬದಲ್ಲಿ ಜನಿಸಿದ ಭರತೇಶ ವೆಂಕಟಾಪುರ, 2018 ರಲ್ಲಿ ಪಿ.ಎಸ್.ಐ. ಆಗಿ ನೇಮಕಗೊಂಡರು. ಪ್ರಾಥಮಿಕ ಶಿಕ್ಷಣವನ್ನು ಹಳಿಂಗಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಾಗೂ ಪ್ರೌಢ ವಿಭಾಗವನ್ನು ತೇರದಾಳದ ಜೆ.ವಿ. ಮಂಡಳದಲ್ಲಿ ಪೂರ್ಣಗೊಳಿಸಿ ಪಿಯುಸಿಯನ್ನು ಬಾಗಲಕೋಟೆ ಬವಿವ ಸಂಘದಲ್ಲಿ ಮಾಡಿದರು. ಧಾರವಾಡ ವಿಶ್ವ ವಿದ್ಯಾಲಯದಲ್ಲಿ ಇ ಮತ್ತು ಸಿ ಪದವಿ ಮುಗಿಸಿದ ಭರತೇಶ, ಬಳಿಕ ಪಿಎಸ್ಐ ಪರೀಕ್ಷೆ ಬರೆದು ಆಯ್ಕೆಗೊಂಡರು. ಮೊದಲು ಮೈಸೂರು, ಬೆಂಗಳೂರು, ಬೆಳಗಾವಿಯಲ್ಲಿಕರ್ತವ್ಯನಿರ್ವಹಿಸಿದ ಬಳಿಕ ಪಿಎಸ್ಐ ದಿಂದ ಸಿಪಿಐ ಆಗಿ (ಇನ್ಸ್ಪೆಕ್ಟರ್) ಬಡ್ತಿ ಹೊಂದಿ ಈಗ ಧಾರವಾಡ ಜಿಲ್ಲಾ ಗುಪ್ತಚರ ಇಲಾಖೆಯಲ್ಲಿ ಇನ್ಸಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಪೊಲೀಸ್ ಧ್ವಜ ದಿನಾಚರಣೆ ನಿಮಿತ್ಯ ಎಪ್ರಿಲ್ ಎರಡರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಗೃಹಮಂತ್ರಿಜಿ.ಪರಮೇಶ್ವರಅವರಿಂದಮುಖ್ಯಮಂತ್ರಿ ಪದಕ ಪಡೆಯುವ ಮೂಲಕ ಚಿಕ್ಕ ವಯಸ್ಸಿನಲ್ಲಿ ಉನ್ನತ ಸ್ಥಾನ ಹಾಗೂ ಪದಕ ಪಡೆದ ಭರತೇಶ ವೆಂಕಟಾಪುರ ಅವರ ಸಾಧನೆಗೆ ಹುಟ್ಟೂರು ಹಳಿಂಗಳಿ ಗ್ರಾಮದಲ್ಲಿರುವ ಸ್ನೇಹಿತರಾದ ಗ್ರಾಮ ಪಂಚಾಯತ್ ಅಧ್ಯಕ್ಷ ಪ್ರದೀಪ ನಂದೆಪ್ಪನವರ, ಜಿನೇಂದ್ರ ಕುಲ್ಲೊಳಿ ನೇತೃತ್ವದಲ್ಲಿ ಸಂಭ್ರಮ ಆಚರಿಸಿದರು. ಮಗನ ಸಾಧನೆ ಕಂಡು ಭರತೇಶ ಅವರ ತಂದೆ–ತಾಯಿ ಹಾಗೂ ಕುಟುಂಬದಲ್ಲಿ ಸಂತಸ ಮನೆ ಮಾಡಿತ್ತು. ಗ್ರಾಮದ ಹಲವು ಯುವಕರು ಪೊಲೀಸ್, ಭಾರತೀಯ ಸೇನೆ, ಇಂಡಿಯನ್ ನೇವಿ ಸೇರಿದಂತೆ ಬೇರೆ ಬೇರೆ ಉನ್ನತ ಹುದ್ದೆಗಳಲ್ಲಿರುವುದು ಹಳಿಂಗಳಿ ಗ್ರಾಮದ ವಿಶೇಷವಾಗಿದೆ.

**ಗ್ರಾಮೀಣ ಪ್ರದೇಶದಲ್ಲಿ ಕಲಿತು ಉನ್ನತ ಹುದ್ದೆ ಹೊಂದುವುದರ ಜತೆಗೆ ಮುಖ್ಯಮಂತ್ರಿ ಚಿನ್ನದ ಪದಕ ಪಡೆದಿರುವ ಭರತೇಶ ವೆಂಕಟಾಪುರ ಅವರ ಸಾಧನೆ ಯುವಕರಿಗೆ ಮಾದರಿ ಆಗಿದೆ. ಭರತೇಶ ಕುಟುಂಬದವರು ಅವರ ಮೇಲೆ ನಂಬಿಕೆ ಇಟ್ಟು ಶಿಕ್ಷಣ ಕೊಡಿಸಿದ್ದಕ್ಕೂ ಇಂದು ಸಾರ್ಥಕ ಆಗಿದೆ. ನಿಜವಾಗಿಯೂ ಇದು ನಮ್ಮ ಗ್ರಾಮಕ್ಕೆ ಸಿಕ್ಕ ಚಿನ್ನದ ಪದಕ ಎಂದರೆ ತಪ್ಪಾಗಲಾರದು.**

**– ಜಿನೇಂದ್ರ ಕುಲ್ಲೊಳಿ.**

# ಲಕ್ಕವ್ವ ದೇವಿಗೆ ಉಡಿ ತುಂಬುವ ಕಾರ್ಯಕ್ರಮ: ಎಲ್ಲ ಜಾತಿ ಧರ್ಮದವರಿಂದ ವಾರದ ಆಚರಣೆ

## ನಗರದ ಹಿರಿಯರಿಂದ ಸಾಮೂಹಿಕ ಮಂಗಳಾರುತಿ | ಎರಡು ಮಂಗಳವಾರ, ಮೂರು ಶುಕ್ರವಾದಂದು ವಾರಾಚರಣೆ

**ಬನಹಟ್ಟಿ:** ಸ್ಥಳೀಯ ಲಕ್ಕವ್ವ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ಶುಕ್ರವಾರ ಸಂಭ್ರಮ ಸಡಗರದಿಂದ ನಡೆಯಿತು.

ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ಲಕ್ಕವ್ವ ದೇವಿಯ ವಿಗ್ರಹಗಳನ್ನು ಬೆಳ್ಳಿ ಮೂರ್ತಿ ಮತ್ತು ಹೂ ಮಾಲೆಗಳಿಂದ ಅಲಂಕರಿಸಲಾಗಿತ್ತು. ದೇವಸ್ಥಾನವನ್ನು ತಳಿರುತೋರಣಗಳಿಂದಶೃಂಗರಿಸಲಾಗಿತ್ತು.

ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ನಗರದ ಹಿರಿಯರು ದೇವಸ್ಥಾನದ ಮುಂಭಾಗದಲ್ಲಿ ಸಾಮೂಹಿಕ ಮಂಗಳಾರುತಿಯನ್ನು ನೆರವೇರಿಸಿದ ನಂತರ ಟೆಂಗಿನಕಾಯಿ ಒಡೆಯುವ ಕಾರ್ಯಕ್ಕೆ ಚಾಲನೆ ನೀಡಿದರು.

ವಾರದ ಆಚರಣೆಯ ಸಂದರ್ಭದಲ್ಲಿ ಯಾವುದೇ ದೇವಸ್ಥಾನದಲ್ಲಿ ಟೆಂಗಿನಕಾಯಿ ಒಡೆಯುವುದಿಲ್ಲ. ನಂತರ ಮಹಿಳೆಯರು ದೇವಸ್ಥಾನಕ್ಕೆ ತೆರಳಿ ಟೆಂಗಿನಕಾಯಿ ಒಡೆದು ಲಕ್ಕವ್ವ ದೇವಿಗೆ ಕುದಿಸಿದ ಹೂರಣದ ಕಡಬು, ಅನ್ನ, ಮೊಸರು ನೈವೇದ್ಯ ಸಲ್ಲಿಸಿದರು. ಎರಡು ಮಂಗಳವಾರ



ಮತ್ತು ಮೂರು ಶುಕ್ರವಾರದಂದು ವಾರದ ಆಚರಣೆ ನಡೆಯುತ್ತದೆ. ಉರಿ ಬಿಸಿಲಿನ ಮಧ್ಯದಲ್ಲಿಯೂ ಮಹಿಳೆಯರು ನಗರದ ಪ್ರಮುಖ ದೇವಸ್ಥಾನಗಳಿಗೆ ತೆರಳಿ ನೈವೇದ್ಯ ಸಲ್ಲಿಸಿದರು.

ವಾರದ ಆಚರಣೆ ಸಂಪ್ರದಾಯ ಪರಂಪರಾಗತವಾಗಿ ನಡೆದುಕೊಂಡು ಬಂದಿದೆ. ನಗರದ ಪುರುಷರು, ಮಹಿಳೆಯರು ಚಿಕ್ಕ ಮಕ್ಕಳು, ಹಿರಿಯರು ಎಲ್ಲ ಜಾತಿ, ಧರ್ಮದವರು, ಬಡವ ಮತ್ತು ಶ್ರೀಮಂತರು ಒಂದಾಗಿ ಲಕ್ಕವ್ವದೇವಿಗೆ ಉಡಿ ತುಂಬುವ ಕಾರ್ಯದಲ್ಲಿ ಭಾಗವಹಿಸುತ್ತಾರೆ ಎಂದು ನಗರದ ಗೌಡರಾದ ಸಿದ್ದನಗೌಡ ಪಾಟೀಲ ತಿಳಿಸಿದರು.

ಸಿದ್ದು ಹಿರೇಮಠ, ಜಗದೀಶ ಹಿರೇಮಠ, ಈಶ್ವರಯ್ಯ ಮಠಪತಿ, ಕಲ್ಲಯ್ಯ ಮಠಪತಿ, ಸಿದ್ದನಗೌಡ ಪಾಟೀಲ, ಶ್ರೀಶೈಲ ಧಬಾಡಿ, ಮಲ್ಲಿಕಾರ್ಜುನ ತುಂಗಳ, ಪ್ರಶಾಂತ ಕೊಳಕಿ, ಕಿರಣ ಆಳಗಿ, ದಾನಪ್ಪ ಹುಲಜತ್ತಿ, ಮಲ್ಲಪ್ಪ ಜನವಾಡ, ಬಸವರಾಜ ಗುಂಡಿ, ರಾಜುಗೌಡ ಪಾಟೀಲ, ಶೇಖರ ಮಾಲಾಪೂರ, ಶೇಖರ ಸಂಪಗಾಂವಿ,

ಮಲ್ಲಿಕಾರ್ಜುನ ಬಾವಲತ್ತಿ, ಬಸವರಾಜ ಗಿಡದಾನಪ್ಪಗೋಳ, ಚೆನ್ನಪ್ಪ ಗುಣಕಿ, ಮಲ್ಲಿನಾಥ ಕಕಮರಿ, ಬಸವರಾಜ ಜಾಡಗೌಡ, ಈರಪ್ಪ ಕೊಣ್ಣೂರ, ರೇವಣಪ್ಪ ಗುಣಕಿ, ಅರ್ಚಕರಾದ ಶ್ರೀಶೈಲ ಬಡಿಗೇರ, ಬಸವರಾಜ ಬಡಿಗೇರ, ಮಂಗಳವಾರ ಪೇಟೆ ಹಟಗಾರ ದೈವ ಮಂಡಳಿ, ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ, ಗೌಡರು ಮತ್ತು ರೈತ ಸಮಾಜದ ದೈವ ಮಂಡಳಿಯ ಸದಸ್ಯರು ಮತ್ತು ಹಿರಿಯರು ಭಾಗವಹಿಸಿದ್ದರು.

# ವಿಶ್ವನಾಥ ದೇವದಾಸರಿಗೆ ಕಲಾಶ್ರೀ ಪ್ರಶಸ್ತಿ ಪ್ರದಾನ

**ರಬಕವಿ–ಬನಹಟ್ಟಿ :** ಎಪ್ರಿಲ್ 5 ರಂದು ಬೆಳಿಗ್ಗೆ 9 ಕ್ಕೆ ಇಲ್ಲಿನ ಎಸ್. ಟಿ. ಸಿ. ಕಾಲೇಜಿನ ಆವರಣದಲ್ಲಿ ಗೆಳೆಯರ ಬಳಗ ಬನಹಟ್ಟಿ ಹಾಗೂ ಎಸ್. ಟಿ. ಸಿ. ಕಾಲೇಜು ಆಶ್ರಯದಲ್ಲಿ ಜರುಗಲಿರುವ ಕಾರ್ಯಕ್ರಮದಲ್ಲಿ ಹೆಸರಾಂತ ಸಂಬಾಳ ವಾದಕ ದಿ. ಸದಾಶಿವ ಹೂಗಾರ ಸ್ಮರಣಾರ್ಥ ’ಕಲಾಶ್ರೀ’ ಪ್ರಶಸ್ತಿಯನ್ನು ನಾವಲಗಿ ಗ್ರಾಮದ ಸಂಬಾಳ ವಾದನದ ಹೆಸರಾಂತ ಯುವ ಕಲಾವಿದ ವಿಶ್ವನಾಥ ದೇವದಾಸರಿಗೆ ಪ್ರದಾನ



ಮಾಡಲಾಗುವುದು.

ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ಅಧ್ಯಕ್ಷತೆ ವಹಿಸಲಿದ್ದು, ರಬಕವಿಯ ಪಿಕೆಪಿಎಸ್ ಬ್ಯಾಂಕ್ ಅಧ್ಯಕ್ಷ ಧರೆಪ್ಪ ಉಳ್ಳಾಗಡ್ಡಿ ಮತ್ತು ನ್ಯಾಯವಾದಿ ವೆಂಕಟೇಶ ನಿಂಗಸಾನಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಬಸವರಾಜ ಹೂಗಾರ, ಮನೋಹರ ಶಿರಹಟ್ಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರೆಂದು ಗೆಳೆಯರ ಬಳಗದ ಸಂಚಾಲಕ ಕಿರಣ ಆಳಗಿ ತಿಳಿಸಿದ್ದಾರೆ.

# ಗುರು ಕಾಂತಿಯವರಿಗೆ ಮುಖ್ಯ ಮಂತ್ರಿಗಳ ಬಂಗಾರದ ಪದಕ



**ರಬಕವಿ–ಬನಹಟ್ಟಿ :** ಸಮೀಪದ ನಾವಲಗಿ ಗ್ರಾಮದ ಗುರು ಕಾಂತಿಯವರು ಪೊಲೀಸ್ ಇಲಾಖೆಯಲ್ಲಿಸಲ್ಲಿಸಿದಅನುಪಮ ಸೇವೆಗಾಗಿ ಮುಖ್ಯಮಂತ್ರಿಗಳ ಬಂಗಾರದ ಪದಕಕ್ಕೆ ಭಾಜನರಾಗಿದ್ದಾರೆ. ಗುರು ಕಾಂತಿ ಸದ್ಯ ಮಂಗಳೂರಿನಲ್ಲಿ ಸೂನ್ ಕ್ರೈಂ ವಿಭಾಗದಲ್ಲಿ ಪಿಎಸ್ಐ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

# ನೂತನ ಅಧ್ಯಕ್ಷ-ಉಪಾಧ್ಯಕ್ಷರಿಗೆ ನ್ಯಾಮಗೌಡರಿಂದ ಸನ್ಮಾನ



**ಜಮಖಂಡಿ :** ತಾಲೂಕಿನ ಕಡಕೋಳ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಅಪ್ಪಾಶಿ ದೇವರವರ ಮತ್ತು ಉಪಾದ್ಯಕ್ಷರಾಗಿ ಮಲ್ಲಯ್ಯಾ ಮಠಪತಿ ಅವರು ಇತ್ತೀಚೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.
ಅವರನ್ನು ಮಾಜಿ ಶಾಸಕ ಆನಂದ ಸಿದ್ದು ನ್ಯಾಮಗೌಡ ಹಾರ್ದಿಕವಾಗಿ ಸನ್ಮಾನಿಸಿದರು.
ಈ ಸಂದರ್ಭದಲ್ಲಿ ಜಮಖಂಡಿಯ ಹಿರಿಯ ನ್ಯಾಯವಾದಿ ಎನ್. ಎಸ್. ದೇವರವರ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಏಗಪ್ಪ ಸವದಿ, ಜಿ. ಕೆ. ಮಠದ, ನಾಗಪ್ಪ ಮುತ್ತಕ್ಕನವರ, ಅಣ್ಣಾಸಾಬ ದೇವರವರ, ಸಂಗಪ್ಪ ದೇವರವರ, ಆನಂದ ಪಾಟೀಲ, ಕಾಡಪ್ಪಾ ದೇಸಾಯಿ, ಹಣಮಂತ ನ್ಯಾಮಗೌಡ, ಯಲ್ಲವ್ವ ಜಾಬಗೌಡ, ಸಾವಿತ್ರಿ ಕುಂಬಾರ, ಮಲ್ಲಪ್ಪಾ ಟಕ್ಕೋಡ, ಪಿ. ಎಸ್. ಮಹಾಂತ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

## ಆನಂದಕುಮಾರ ಮೋಪಗಾರಗೆ ಮುಖ್ಯಮಂತ್ರಿಗಳ ಬಂಗಾರದ ಪದಕ



**ರಬಕವಿ-ಬನಹಟ್ಟಿ :** ತಾಲೂಕಿನ ಯಲ್ಲಟ್ಟಿ ಗ್ರಾಮದ ಆನಂದಕುಮಾರ ಮೋಪಗಾರ ಅವರು ಪೋಲೀಸ್ ಇಲಾಖೆಯಲ್ಲಿ ಸಲ್ಲಿಸಿದ ಉತ್ತಮ ಸೇವೆಗಾಗಿ ಮುಖ್ಯಮಂತ್ರಿಗಳ ಬಂಗಾರದ ಪದಕಕ್ಕೆ ಭಾಜನರಾಗಿದ್ದಾರೆ. ಆನಂದಕುಮಾರ ಮೋಪಗಾರ ಸದ್ಯ ಬೆಂಗಳೂರಿನ ಗೋವಿಂದಪುರ ಠಾಣೆ ಪಿಎಸ್ಐ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಯಲ್ಲಟ್ಟಿ ಗ್ರಾಮ ಪಂಚಾಯತಿ ಅಧ್ಯಕ್ಷ ಮಹಾದೇವ ಮೋಪಗಾರ ಅವರ ಪುತ್ರರಾಗಿದ್ದಾರೆ.




**ತೇರದಾಳ:** ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳು ಶುಕ್ರವಾರ ಯಶಸ್ವಿಯಾಗಿ ಸುಸೂತ್ರವಾಗಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ತೇರದಾಳ ಜೆವಿ ಮಂಡಳ ಸಹ ಶಿಕ್ಷಕ ನೇಮಿನಾಥ ಜಮಖಂಡಿ ಎಲ್ಲ ಶಿಕ್ಷಕರ ಪರವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಎ. ಕೆ. ಬಸಣ್ಣವರ ಹಾಗೂ ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಎಸ್. ಜಿ. ಬಿಜಾಪುರ ಅವರನ್ನು ಅಭಿನಂದಿಸಿದರು. ರವೀಂದ್ರ ಸಂಪಗಾಂವಿ, ಭಜಂತ್ರಿ ಹಾಜರಿದ್ದರು.

# ಶ್ರೀಶೈಲ ಪಾದಯಾತ್ರಿಗಳು ಮತ್ತು ಕಂಬಿ ಮಲ್ಲಯ್ಯನಿಗೆ ಅದ್ದೂರಿಯ ಸ್ವಾಗತ

**ಮಹಾಲಿಂಗಪುರ :** ಸಮೀಪದ ಚಿಮ್ಮಡ ಗ್ರಾಮದಿಂದ ಶ್ರೀಶೈಲ ಕ್ಷೇತ್ರಕ್ಕೆ ಪಾದಯಾತ್ರೆಯ ಮೂಲಕ ತೆರಳಿದ್ದ ಮುನ್ನೂರಕ್ಕೂ ಹೆಚ್ಚು ಜನ ಭಕ್ತಾದಿಗಳು ಗುರುವಾರ ಗ್ರಾಮದ ದ್ವಾರ ಬಾಗಿಲಿನ ಮೂಲಕ ಸ್ವಗ್ರಾಮ ಪ್ರವೇಶಿಸಿದರು.
ಕಳೆದ ಹದಿನೈದು ದಿನಗಳ ಹಿಂದೆ ಹೋಳಿ ಹುಣ್ಣಿಮೆ ದಿನದಂದು ಗ್ರಾಮದಿಂದ ನೆರೆಯ ಆಂಧ್ರಪ್ರದೇಶದಶ್ರೀಶೈಲಕ್ಷೇತ್ರಕ್ಕೆಪಾದಯಾತ್ರೆ ಮೂಲಕ, ವಾಹನಗಳ ಮೂಲಕ ತೆರಳಿದ್ದ ನೂರಾರು ಜನ ಭಕ್ತಾಧಿಗಳು ಕಳೆದ ನಾಲ್ಕು ದಿನಗಳಿಂದ ಗ್ರಾಮದಿಂದ ಹೊರಗಡೆಯಿರುವ ದೇವಸ್ಥಾನಗಳಲ್ಲಿ, ಶಾಲೆಗಳಲ್ಲಿ ಬೀಡು ಬಿಟ್ಟಿದ್ದರು.
ವಾಸ್ತವ್ಯವಿರುವ ಸ್ಥಳದಲ್ಲಿಯೇ ಪಾದಯಾತ್ರಿಗಳಿಗೆ ಕಳೆದ ಮೂರು ದಿನಗಳವರೆಗೆ ಊಟ ಮತ್ತು ಉಪಹಾರದ ವ್ಯವಸ್ಥೆಯನ್ನುಹಲವಾರು ಜನ ಭಕ್ತಾಧಿಗಳು ವ್ಯವಸ್ಥೆಗೊಳಿಸಿ ಸಾಮರಸ್ಯ ಮೆರೆದರು.



ಪದ್ಧತಿಯಂತೆ ಐದೇಶಿಯ ಐದು ದಿನಗಳ ಮುಂಚಿನ ದಿನವಾದ ಗುರುವಾರ ಮುಂಜಾನೆ ಪ್ರಭು ಮಹಾಸ್ವಾಮಿಗಳಿಂದ ಮಂಗಳಾರತಿ ನೆರವೇರಿಸುವ ಮೂಲಕ ಪಾದಯಾತ್ರಿಗಳನ್ನು ಗ್ರಾಮದೊಳಗೆ ಬರಮಾಡಿಕೊಳ್ಳಲಾಯಿತು.
ಮಲ್ಲಯ್ಯದೇವರ ಕಂಬಿಯನ್ನು ಶ್ರೀಗಳು ಹೆಗಲಮೇಲೆ ಹೊತ್ತು ಗ್ರಾಮದ ದ್ವಾರ ಬಾಗಿಲಿನ ಮೂಲಕ ಗ್ರಾಮ ಪ್ರವೇಶಿಸಿದರು.
ನಂತರ ಗುಡ್ಡದ ಪ್ರಭುಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷಪೂಜೆ ಮದ್ಯಾಹ್ನದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನಡೆಯುವ ಮಹಾ ಮಂಗಲಪ್ರಸಾದ ಸ್ವೀಕಾರದೊಂದಿಗೆ ಪಾದಯಾತ್ರಿಗಳು ತಮ್ಮ ತಮ್ಮ ಮನೆಗಳಿಗೆ ತೆರಳಿದರು.
**ಮುಸ್ಲಿಂ ವ್ಯಾಪಾರಿಯಿಂದ ಪ್ರಸಾದ:**
ಗ್ರಾಮದ ಮುಸ್ಲಿಂ ಸಮಾಜದ ವ್ಯಾಪಾರಿ ಶೌಕತ ಮೀರಾಸಾಬ ಪಾಲಭಾಂವಿ ಅವರು ಶ್ರೀಶೈಲ ಪಾದಯಾತ್ರಿಗಳಿಗೆ ಹಾಗೂ ಗ್ರಾಮದ ಸರ್ವ ಸಮಾಜ ಬಾಂಧವರಿಗೆ ಬುಧವಾರ ರಾತ್ರಿ ಭರ್ಜರಿ ಪ್ರಸಾದ ವ್ಯವಸ್ಥೆ ಕೈಗೊಂಡಿದ್ದರು.
ಸುಮಾರು 1-30 ಕ್ವಿಂಟಾಲ್ ಮುಂಬೈ ಮಾದೇಲಿ, ಎರಡು ಕ್ವಿಂಟಾಲ್ ಅನ್ನಪ್ರಸಾದ ವ್ಯವಸ್ಥೆ ಮಾಡಿ, ಸುಮಾರು ಮೂರು ಸಾವಿರ ಜನರಿಗೆ ಭರ್ಜರಿ ಪ್ರಸಾದ ವಿತರಣೆಯ ಮೂಲಕ ಭಾವೈಕ್ಯತೆಗೆ ಸಾಕ್ಷಿಯಾದರು. ಗ್ರಾಮದ ಪ್ರಮುಖರು, ಮುಸ್ಲಿಂ ಸಮಾಜದ ಹಿರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ದೇಶದಲ್ಲಿಯೇಅತಿಹೆಚ್ಚುಕಬ್ಬುನುರಿಸಿದಗೋದಾವರಿಶುಗರ್ಸ್ 24.62 ಲಕ್ಷ ಟನ್ ಕಬ್ಬು ನುರಿಸಿ ದಾಖಲೆ ಬರೆದ ಸೋಮೈಯ ಕಾರ್ಖಾನೆ

**ಮಹಾಲಿಂಗಪುರ :** ರೈತರು ಸಮೀರವಾಡಿಯ ಸೋಮೈಯ ಸಕ್ಕರೆ ಕಾರ್ಖಾನೆಯ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ, ಪ್ರೋತ್ಸಾಹದಿಂದಾಗಿ 2024-25 ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಲ್ಲಿ ಗೋದಾವರಿ ಸಕ್ಕರೆ ಕಾರ್ಖಾನೆಯು ದೇಶದಲ್ಲಿಯೇ ಅತಿಹೆಚ್ಚು 24.62 ಲಕ್ಷ ಟನ್ ಕಬ್ಬು ನುರಿಸುವ ಮೂಲಕ ದಾಖಲೆ ನಿರ್ಮಿಸಿದೆ ಎಂದು ಕಾರ್ಖಾನೆಯ ಮುಖ್ಯ ಕಾರ್ಯನಿರ್ವಾಹಕ ಬಿ. ಆರ್. ಭಕ್ಷಿ ಹೇಳಿದರು.
ಶುಕ್ರವಾರ ಕಾರ್ಖಾನೆ ಆವರಣದಲ್ಲಿ ಹಮ್ಮಿಕೊಂಡ 2024-25 ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನ ಸಮಾರೋಪ ಸಮಾರಂಭದಲ್ಲಿ ಪ್ರಸಕ್ತ ಹಂಗಾಮಿನಲ್ಲಿ ಅತಿಹೆಚ್ಚು ಕಬ್ಬು ಪೂರೈಸಿದ ರೈತರು, ರೈತ ಕುಟುಂಬಗಳು, ಕಬ್ಬಿನ ಗ್ಯಾಂಗ್ಮನ್ನಗಳು, ಚಕ್ಕಡಿ ಬಂಡಿ ಮಾಲೀಕರು, ಟ್ರ್ಯಾಕ್ಟರ್ ಮಾಲೀಕರು, ಮಹಾರಾಷ್ಟ್ರದ ಬೀಡ ಜಿಲ್ಲೆಯ ಕಾರ್ಮಿಕರಿಗೆ ಕಾರ್ಖಾನೆ ವತಿಯಿಂದ ಸನ್ಮಾನಿಸಿ ಮಾತನಾಡಿದ ಅವರು ಕಳೆದ ಐವತ್ತೂರು ವರ್ಷಗಳಿಂದ ಗೋದಾವರಿ ಕಾರ್ಖಾನೆಯು ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳ ರೈತರ ವಿಶ್ವಾಸಾರ್ಹ ಕಾರ್ಖಾನೆಯಾಗಿ ಕಾರ್ಯ ನಿರ್ವಹಿಸುತ್ತಿರುವದು ಹೆಮ್ಮೆಯ



ಸಂಗತಿ.
ಪ್ರಸಕ್ತ ವರ್ಷದ ಹಂಗಾಮಿನಲ್ಲಿ 148 ದಿನಗಳ ಕಾಲ ರೈತರು, ಕಬ್ಬು ಕಟಾವು ಗ್ಯಾಂಗ್, ಟ್ರ್ಯಾಕ್ಟರ್ ಮಾಲೀಕರು, ಎತ್ತಿನಬಂಡಿ ಮಾಲೀಕರು, ಕಾರ್ಮಿಕರು, ಕಾರ್ಖಾನೆಯ ಎಲ್ಲಾ ವಿಭಾಗದ ಅಧಿಕಾರಿಗಳು, ಕಾರ್ಮಿಕರ ಒಗ್ಗಟ್ಟು, ಶ್ರದ್ಧೆಯ ಕೆಲಸದಿಂದಾಗಿ ಇದೇ ಮೊದಲ ಬಾರಿಗೆ ದೇಶದಲ್ಲಿಯೇ ಅತಿ ಹೆಚ್ಚು ಕಬ್ಬು ನುರಿಸಿದ ಕಾರ್ಖಾನೆ ಎಂಬ ಕೀರ್ತಿಗೆ ಪಾತ್ರವಾಗಿದ್ದು ಬಹಳ ಸಂತೋಷದ ಸಂಗತಿ. ಇದಕ್ಕೆ ಸಹಕಾರ ನೀಡಿದ ಎಲ್ಲರಿಗೂ ಅನಂತ ಧನ್ಯವಾದಗಳು. ನಿಮ್ಮೆಲ್ಲರ ಬೆಂಬಲ, ಪ್ರೋತ್ಸಾಹ ಸದಾ ನಮ್ಮ ಗೋದಾವರಿ ಕಾರ್ಖಾನೆ ಮೇಲಿರಲಿ ಎಂದರು.
**ಎತ್ತಿನ ಬಂಡಿಗಳ ಅದ್ದೂರಿ ಮೆರವಣಿಗೆ :**
ಪ್ರಸಕ್ತ ಹಂಗಾಮಿನ ಕೊನೆಯ ದಿನವಾದ ಎಪ್ರಿಲ್ 4 ರಂದು ಮುಂಜಾನೆ ಕಬ್ಬು ತುಂಬಿಕೊಂಡು ಬಂದಿದ್ದ ಹತ್ತಾರು ಎತ್ತಿನ ಬಂಡಿಗಳು ಮತ್ತು
ಟ್ರ್ಯಾಕ್ಟರ್ಗಳನ್ನು ಕರಡಿ ಮಜಲು, ಗೊಂಬೆ ಕುಣಿತ, ಡೊಳ್ಳುಕುಣಿತದಕಲಾವಿದರೊಂದಿಗೆ ಸಮೀರವಾಡಿ ಕ್ರಾಸ್ನಿಂದ ಕಾರ್ಖಾನೆಯ ಕೇನ್ ಯಾರ್ಡವರೆಗೆ ಭವ್ಯ ಮೆರವಣಿಗೆ ನಡೆಸಿಕೊಂಡು ಬಂದು ಕೇನ್ಯಾರ್ಡಗೆ ಪೂಜೆ ಸಲ್ಲಿಸಲಾಯಿತು.
ಸುಮಾರು ಎರಡೂವರೆ ಗಂಟೆಗಳ ಕಾಲ ಜರುಗಿದ ಭವ್ಯಮೆರವಣಿಗೆಯಲ್ಲಿ ನೂರಾರು ರೈತರು, ಕಾರ್ಖಾನೆಯ ಹಿರಿಯ, ಕಿರಿಯ ಅಧಿಕಾರಿಗಳು, ಕಾರ್ಮಿಕರು ಕುಣಿದು ಕುಪ್ಪಳಿಸುವ ಮೂಲಕ ಕಾರ್ಖಾನೆಯ ದಾಖಲೆಯ ಕಬ್ಬು ನುರಿಸಿದ ಸಂಭ್ರಮವನ್ನು ಆಚರಿಸಿದರು. ನಂತರ ಸಾವಿರಾರು ರೈತರು, ಕಾರ್ಮಿಕರಿಗೆ ಹೋಳಿಗೆ ಊಟವನ್ನು ಬಡಿಸಲಾಯಿತು.
ಕಾರ್ಖಾನೆಯ ಅಧಿಕಾರಿಗಳಾದ ದಿನೇಶ ಶರ್ಮಾ, ವ್ಹಿ. ಎಸ್. ಕಣಬೂರ, ಎಂ. ರಾಮಚಂದ್ರ, ವಿಜಯಕುಮಾರ ಕಣವಿ, ರಾಮಚಂದ್ರ ಸೋನವಾಲ್ಕರ, ರಾಜು ಶೆಟ್ಟರ, ಮಜ್ದೂರ ಯುನಿಯನ್ ಅಧ್ಯಕ್ಷ ಬಸವರಾಜ ಪೂಜಾರಿ, ಎಸ್ಓಸಿ ಅಧ್ಯಕ್ಷ ಬಸವರಾಜ ಭದ್ರಶೆಟ್ಟಿ, ಸೈದಾಪೂರ ಗ್ರಾಮ ಪಂಚಾಯತ್ ಅಧ್ಯಕ್ಷ ಮಹಾಲಿಂಗಪ್ಪ ಸನದಿ, ರೈತ ಮುಖಂಡರಾದ ರಾಮನಗೌಡ ಪಾಟೀಲ, ರಂಗನಗೌಡ ಪಾಟೀಲ, ಬಿ. ಜಿ. ಹೊಸೂರ, ಲಕ್ಷ್ಮಣ ಹುಚ್ಚರಡ್ಡಿ, ಭುಜಬಲಿ ಕೆಂಗಾಲಿ, ಮಹಾದೇವ ಮಾರಾಪೂರ, ಸದಾಶಿವ ಕಂಬಳಿ, ಈರಣ್ಣ ಕನಕರಡ್ಡಿ, ಮಲ್ಲಿಕಾರ್ಜುನ ಖಾನಗೌಡರ, ಮಹಾದೇವ ಚೋಳಿ, ಆರ್. ಕೆ. ಮಳಲಿ, ಸುಭಾಸ ಶಿರಬೂರ, ಭೀಮಸಿ ಮಗದುಮ್, ಪ್ರಕಾಶ ಚನ್ನಾಳ, ಬಸವರಾಜ ಶಿರೋಳ, ವಿಠ್ಠಲ ಹೊಸಮನಿ, ಮಹಾದೇವ ನಾಡಗೌಡ, ಗೋವಿಂದ ನಿಂಗಸಾನಿ, ಶ್ರೀಶೈಲ ಚನ್ನಾಳ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

# ಜಾನಪದವು ಹಳ್ಳಿಯ ಬದುಕಿನ ಅನಾವರಣವಾಗಿದೆ: ಡಾ. ಪೋತರಾಜ

**ಮೂಡಲಗಿ:** "ಹಳ್ಳಿಯ ಬದುಕು ಬಂಗಾರದ ಬದುಕು. ಇಂದು ನಾವು ಆಧುನಿಕ ಸಂಸ್ಕೃತಿಗೆ ಒಗ್ಗಿಕೊಂಡು ನಿಜವಾದ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ಮುಂದಿನ ಜನಾಂಗಕ್ಕೆ ಜನವಾಣಿಯಾಗಿರುವ ಈ ಜಾನಪದ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಮಹಾವಿದ್ಯಾಲಯ ಹಮ್ಮಿಕೊಂಡ ಈ ಜಾನಪದ ಉತ್ಸವ ಕಾರ್ಯಕ್ರಮವನ್ನು ಇಲಾಖೆ ಆದೇಶ ಮಾಡುವ ಪೂರ್ವದಲ್ಲಿಯೇ ನಮ್ಮ ಮೂಡಲಗಿ ಕಾಲೇಜು ಕಳೆದ ಎಂಟು ವರ್ಷಗಳಿಂದ ನಡೆಸುತ್ತಾ ಬಂದಿದ್ದು ನಾಡಿನಾದ್ಯಂತ ಹಬ್ಬಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಪ್ರತಿ ವರ್ಷವೂ ಈ ಕಾರ್ಯಕ್ರಮವು ಮತ್ತಷ್ಟು ವಿಜೃಂಭಣೆಯಿಂದ ಜರುಗಲಿ ಎಂದು ಬನಹಟ್ಟಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ಡಾ. ಮಹಾದೇವ ಪೋತರಾಜ ಹೇಳಿದರು
ಸ್ಥಳೀಯ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಐ.ಕ್ಯೂ.ಎ.ಸಿ. ಅಡಿಯಲ್ಲಿ ಹಾಗೂ ಸಾಂಸ್ಕೃತಿಕ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ ಜಾನಪದ ಉತ್ಸವ-2025 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
ಕಾರ್ಯಕ್ರಮದ ಮೊದಲಿಗೆ ಅತಿಥಿ ಮಹೋದಯರನ್ನು ಜಾನಪದ ಕಲಾವಿದರ ತಂಡದೊಂದಿಗೆ ಡೊಳ್ಳು ಬಾರಿಸುವುದರ ಮೂಲಕ ವೇದಿಕೆಗೆ ಕರೆತರಲಾಯಿತು. ವೇದಿಕೆ ಮೇಲಿನ ಗಣ್ಯರು ಡೊಳ್ಳು




ಬಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.
ಪ್ರಭಾರಿ ಪ್ರಾಂಶುಪಾಲ ಬಿ.ಎಸ್.ಕೆಸರಗೊಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, "ಇಂದಿನ ದಿನಮಾನಗಳಲ್ಲಿ ನಶಿಸಿ ಹೋಗುತ್ತಿರುವ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಎಲ್ಲರ ಸಹಕಾರದಿಂದ ಮಹಾವಿದ್ಯಾಲಯದಿಂದ ಮಾಡೋಣ. ಇದಕ್ಕೆ ಎಲ್ಲರೂ ಕೈ ಜೋಡಿಸಿ ನಮ್ಮ ಸಂಸ್ಕೃತಿ ಉಳಿಸಿ ಬೆಳೆಸೋಣ ಎಂದು ಹೇಳಿದರು.
ಕಾರ್ಯಕ್ರಮದಲ್ಲಿ ಜಾನಪದ ಕಲಾವಿದ ನಾಗೇಂದ್ರ ಮಾನೆ ಹಾಗೂ ತಂಡದವರು ಗೊಂದಲಿಗರ ಪದವನ್ನು ಅದ್ಭುತವಾಗಿ ಹಾಡಿದರು. ಸ್ಥಳೀಯ ಮೂಡಲಗಿಯ ಜಾನಪದ ಕಲಾವಿದ ಚುಟುಕುಸಾಬ ಜಾತಗಾರ ಅವರು ಸಿದ್ಧಿ ಸೋಗು ಕಲೆಯನ್ನು ಪ್ರದರ್ಶಿಸಿದರು.
ಇದೇ ಸಂದರ್ಭದಲ್ಲಿ ಅವರಿಗೆ ಇತ್ತೀಚೆಗೆ ಏಷಿಯಾ ಇಂಟರ್ ನ್ಯಾಶನಲ್ ಕಲ್ಚರಲ್ ಯುನಿವರ್ಸಿಟಿಯ ವತಿಯಿಂದ ಗೌರವ ಡಾಕ್ಟರೇಟ್ ಪದವಿ ನೀಡಿದ ಪ್ರಯುಕ್ತ ಮಹಾವಿದ್ಯಾಲಯದಿಂದ ಸನ್ಮಾನಿಸಲಾಯಿತು.
ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ವಿಭಾಗದ ಸಂಯೋಜಕ ಶಿವಾನಂದ ಚಂಡಕೆ ಪ್ರಾಸ್ತಾವಿಕವಾಗಿ ಮಾತನಾಡಿದರು.
ಸಿ.ಡಿ.ಸಿ. ಸದಸ್ಯರಾದ ಚಂದ್ರು ಗಾಣಿಗ, ಸಂಜೀವ ಮೊಕಾಶಿ, ಉಪನ್ಯಾಸಕರಾದ ಶಿವಕುಮಾರ, ಬಿ. ಸಿ. ಹೆಬ್ಬಾಳ, ಸುಮಿತ್ರಾ ಮಾಸ್ತಿ, ರಾಧಾ ಎಂ.ಎನ್. , ಗಾಯತ್ರಿ ಸಾಳೋಖೆ, ಹನುಮಂತ ಕಾಂಬಳೆ, ಬಿ.ಎಸ್.ನಾಯಿಕ, ಎ. ಜಿ. ಗಿರೆನ್ನವರ, ಎನ್. ಬಿ. ಸಂಗ್ರೇಜಿಕೊಪ್ಪ, ಸಂಜೀವಕುಮಾರ ಗಾಣಿಗೇರ, ಶ್ರದ್ಧಾ ಬೇವಿನಕಟ್ಟಿ, ಡಾ. ಹಾಲಪ್ಪ ಮಡಿವಾಳರ, ಸಂಜೀವ ಮದರಖಂಡಿ ಮುಂತಾದವರು ಭಾಗವಹಿಸಿದ್ದರು.
ಸುಷ್ಮಿತಾ ಟಗರೆ ಹಾಗೂ ಲಕ್ಷ್ಮಿ ತೋಟಗಿ ಸ್ವಾಗತಿಸಿದರು. ಮಾಲಾಶ್ರೀ ಮುಗುಳಖೋಡ ಪರಿಚಯಿಸಿದರು. ಅಭಿಷೇಕ ಕಕಮರಿ ಹಾಗೂ ಶೃತಿ ಮಾಲಗಾರ ಸೊಗಸಾಗಿ ನಿರೂಪಿಸಿದರು. ರೂಪಾ ಕಂಕಣವಾಡಿ ವಂದಿಸಿದರು.

## 'ಗೆಳೆಯ ನೀನು ಹಳೆಯ ನಾನು' ನಾಟಕ ಪ್ರದರ್ಶನ



**ಬೆಳಗಾವಿ :** ನಗರದ ರಂಗಸಂಪದದವರು ವಿಶ್ವರಂಗಭೂಮಿ ದಿನಾಚರಣೆ ಮತ್ತು ರಂಗಸಖ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ ದಿ. 29 ಶನಿವಾರದಂದು ಸಾ. 6.30 ಕ್ಕೆ ಕೋನವಾಳ ಬೀದಿಯಲ್ಲಿರುವ ಲೋಕಮಾನ್ಯ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದರು. ಈ ಸಂದರ್ಭದಲ್ಲಿ ರಂಗಸಂಪದ ತಂಡದವರಿಂದ ಶ್ರೀರಂಗರು ರಚಿಸಿದ್ದ 'ಗೆಳೆಯ ನೀನು ಹಳೆಯ ನಾನು' ನಾಟಕ ಪ್ರದರ್ಶನ ಗೊಂಡಿತು.
ಸಂಶಯವೆಂಬುದು ಮನುಷ್ಯನನ್ನು ಹೇಗೆ ತಿನ್ನುತ್ತದೆ. ಮನೆತನದ ವಾತಾವರಣವನ್ನು ಹಾಳು ಮಾಡುತ್ತದೆ ಎಂಬುದನ್ನು ಎಳೆ ಎಳೆಯಾಗಿ ಬಿಚ್ಚಿಡುವ ನಾಟಕವೇ 'ಗೆಳೆಯ ನೀನು ಹಳೆಯ ನಾನು' ಸುಮಾರು ನಾಲ್ವತ್ತು ವರ್ಷಗಳ ಹಿಂದೆಯೇ ಶ್ರೀರಂಗರು ರಚಿಸಿರುವ ನಾಟಕವಿದು.
ಯಾವುದೇ ಒಂದು ಭಾಷೆಯನ್ನು ನಾಟಕ ಮುಗಿಯುವವರೆಗೆ ಅದೇ ಭಾಷೆಯನ್ನು ಬಳೆಸಿಕೊಂಡು ಹೋಗುವುದು ತುಂಬ ಕಷ್ಟದ ಕೆಲಸ. ಉತ್ತರ ಕರ್ನಾಟಕದ ಭಾಷೆಯನ್ನು ಬಳೆಸುವಲ್ಲಿ ಯೋಗೇಶ ದೇಶಪಾಂಡೆಯವರು ನೂರಕ್ಕೆ ನೂರು ಅಂಕ ಪಡೆದರು.
ಪಾತ್ರಕ್ಕೆ ತಕ್ಕಂತೆ ಭಾವನಾತ್ಮಕ ಅಭಿನಯದಲ್ಲಿ ಪವಿತ್ರಾ ರೇವಣಕರ, ನೈಜ ಅಭಿನಯದಲ್ಲಿ ಪದ್ಮಾ ಕುಲಕರ್ಣಿ ಎಲ್ಲರ ಗಮನ ಸೆಳೆದರು. ರಾಮಚಂದ್ರ ಭಟ್, ಅರವಿಂದ ಪಾಟೀಲ, ಪ್ರಸಾದ ಕಾರಜೋಳ ತಮ್ಮ ತಮ್ಮ ಪಾತ್ರಗಳಿಗೆ ನ್ಯಾಯವನ್ನೊದಗಿಸಿದರು.
ಶ್ರೀರಂಗರ ನಾಟಕವನ್ನು ರಂಗರೂಪಕ್ಕೆ ತರುವುದು ತುಂಬ ಕಷ್ಟದ ಕೆಲಸ. ಈ ನಾಟಕವನ್ನು ರಂಗರೂಪಕ್ಕೆ ತಂದ ಡಾ. ಅರವಿಂದ ಕುಲಕರ್ಣಿಯವರು ತಾವೊಬ್ಬ ಸಮರ್ಥ ನಿರ್ದೇಶಕರೆಂಬುದನ್ನು ಸಾಬೀತು ಪಡಿಸಿದರು.
ರಂಗಸಂಪದಸಂಸ್ಥಾಪಕರಾದಶ್ರೀಪತಿಮಂಜನಬೈಲು ಉಪಸ್ಥಿತರಿದ್ದರು.

## ವಿಶ್ವ ರಂಗಭೂಮಿ ದಿನಾಚಾರಣೆ ಮತ್ತು "ರಂಗಸಖ" ಪ್ರಶಸ್ತಿ ಪ್ರದಾನ ಸಮಾರಂಭ

# ನಮ್ಮನ್ನು ನಾವು ನೋಡಿಕೊಳ್ಳುವ ಮಾಧ್ಯಮವೇ ನಾಟಕ: ಡಾ. ಹೆಗಡೆ

**ಬೆಳಗಾವಿ:** ತ್ರೇತಾಯುಗಆರಂಭವಾಗುವ ಕಾಲದಲ್ಲಿ ನಾಟಕ ಹುಟ್ಟಿಕೊಂಡಿತು. ಭೂಮಿಯ ಮೇಲೆ ಏನು ನಡಿತಾಯಿದೆ, ಯಾವ್ಯಾವ ಮೌಲ್ಯಗಳು ಕುಸಿಯುತ್ತಿವೆ ಇದನ್ನೆಲ್ಲ ತಿಳಿದುಕೊಳ್ಳುವ ಕುರಿತಂತೆ ದೇವತೆಗಳು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಾಗ ಹುಟ್ಟಿಕೊಂಡದ್ದೇ ನಾಟಕ. ಈಗ ನಮ್ಮನ್ನು ನಾವು ಕಂಡುಕೊಳ್ಳುವ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತಲಿದೆ. ನಮ್ಮ ನೋವು, ನಲಿವು, ಸುಖ ದುಃಖಗಳ ಪ್ರತಿಬಿಂಬವಾಗಿ ನಾಟಕ ಕಾರ್ಯ ನಿರ್ವಹಿಸುತ್ತಲಿದೆ ಎಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಜಿ. ಎಂ. ಹೆಗಡೆಯವರು ಇಂದಿಲ್ಲಿ ಹೇಳಿದರು.
ದಿ. 27 ಗುರುವಾರದಂದು ಸಾ. 5-30 ಕ್ಕೆ ತಿಲಕಚೌಕ ಹತ್ತಿರುವಿರುವ ಲೋಕಮಾನ್ಯ ರಂಗ ಮಂದಿರದಲ್ಲಿ ರಂಗಸಂಪದದವರು ವಿಶ್ವರಂಗಭೂಮಿ ದಿನಾಚಾರಣೆ ಮತ್ತು "ರಂಗಸಖ" ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಂಡಿದ್ದರು. 2025 ರ ರಂಗಸಖ ಪ್ರಶಸ್ತಿಯನ್ನು ಖ್ಯಾತ ಮೇಕಪ್ ಕಲಾವಿದರಾದ ಸಂತೋಷ ಮಹಾಲೆ ಇವರಿಗೆ ನೀಡಿ ಗೌರವಿಲಾಯಿತು. ಅತಿಥಿಗಳಾಗಿ ಆಗಮಿಸಿದ್ದ ಡಾ. ಜಿ. ಎಂ. ಹೆಗಡೆ ಮೇಲಿನಂತೆ ಅಭಿಪ್ರಾಯ ಪಟ್ಟರು.
2025 ರ ರಂಗಸಖ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಖ್ಯಾತ ಮೇಕಪ್ ಕಲಾವಿದ ಸಂತೋಷ ಮಹಾಲೆ, ಪ್ರಶಸ್ತಿಯು ನನಗೆ ತುಂಬ ಸಂತೋಷವನ್ನುಂಟು ಮಾಡಿದೆ. ಮೆಕಪ್ ಕ್ಷೇತ್ರದಲ್ಲಿ ನಾನೇನಾದರೂ ಸಾಧನೆ ಮಾಡಿದ್ದೇನೆ ಎಂದರೆ ಅದು ರಂಗಸಂಪದ ಹಾಗೂ ನನ್ನ ತಂದೆಯವರು ಕಾರಣ ಅದಕ್ಕಾಗಿ ನನಗೆ ಸಂದ ಗೌರವವನ್ನು ನನ್ನ ತಂದೆಯವರಿಗೆ ಅರ್ಪಿಸುತ್ತೇನೆ ಎಂದು ಹೇಳಿದ ಅವರು ರಂಗಸಂಪದದ ನಾಟಕಗಳಲ್ಲಿ 'ಪರಿಮಳದವರು' ನಾಟಕದಲ್ಲಿಯ ಶ್ರೀ ರಾಘವೇಂದ್ರ ಸ್ವಾಮೀಜಿಯವರ ಪಾತ್ರದ ಮೇಕಪ್ ನನಗೆ ತುಂಭ ಖುಷಿಯನ್ನು ತಂದು ಕೊಟ್ಟಿದೆ ಎಂದು ಹೇಳಿದರು.
ರಂಗ ಸಂಪದದ ಅಂಧ್ಯಕ್ಷರಾದ ಡಾ. ಅರವಿಂದ ಕುಲಕರ್ಣಿಯವರು ಮಾತನಾಡಿ ಮಾರ್ಚ 27 ವಿಶ್ವ ರಂಗಭೂಮಿ ದಿನಾಚರಣೆಯ ದಿನ. ಜಗತ್ತಿನ ತುಂಬೆಲ್ಲ ಈ ದಿನವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ರಂಗಸಂಪದ ಪ್ರತಿವರ್ಷವೂ ರಂಗಸಖ ಪ್ರಶಸ್ತಿ ನೀಡುವುದು ಮತ್ತು ಒಂದು ನಾಟಕ ಪ್ರದರ್ಶನದ ಮೂಲಕ ತಪ್ಪದೇ ಆಚರಿಸುತ್ತ ಬಂದಿದೆ ಎಂದು ಅಭಿಮಾನದಿಂದ ಹೇಳಲು ಬಯಸುತ್ತೇನೆ ಎಂದು ಹೇಳಿದರು.
ಈ ಸಂದರ್ಭದಲ್ಲಿ ಅನನ್ಯ ತಂಡ ಬೆಂಗಳೂರು ಇವರಿಂದ ಖ್ಯಾತ ಕಿರುತೆರೆ ಕಲಾವಿದ ಎಸ್. ಎನ್. ಸೇತುರಾಮ ಅವರು ನಿರ್ದೇಶಿಸಿ ಅಭಿನಯಿಸಿರುವ 'ತಳಿ' ನಾಟಕ ಪ್ರದರ್ಶನಗೊಂಡಿತು. ಮಹಿಳಾ ಶೋಷಣೆಯನ್ನೇ ಮುಖ್ಯ ವಸ್ತುವನ್ನಾಗಿಟ್ಟುಕೊಂಡು ಈ ನಾಟಕವನ್ನು ಬರೆದಿದ್ದು. ನಾಟಕದ ಸಂಭಾಷಣೆ ಪ್ರೇಕ್ಷಕರನ್ನು ಅಲ್ಲಲ್ಲಿ ತಲೆ ತಗ್ಗಿಸುವಂತೆ ಮಾಡುತ್ತದೆ. ಕುಟುಂಬ ಸಮೇತರಾಗಿ ಬಂದವರನ್ನು ಸಂಭಾಷಣೆಯುಮುಜುಗರವನ್ನುಂಟು ಮಾಡುತ್ತದೆ.
ಮುಖ್ಯ ಪಾತ್ರಧಾರಿ ಎಸ್. ಎನ್. ಸೇತುರಾಮ ಮಿಂಚಿದ್ದಾರೆ. ಶ್ರೀಪತಿ ಮಂಜನಬೈಲು, ಸೌಮ್ಯ ಭಾಗವತ, ಅಪರ್ಣಾ ಗುಮಾಸ್ತೆ ತಮ್ಮ ಪಾತ್ರಗಳಿಗೆ ನ್ಯಾಯವನ್ನೊದಗಿಸಿದ್ದಾರೆ.
ಪೂರ್ವಿ ರಾಜಪುರೋಹಿತ ಪ್ರಾರ್ಥಿಸಿದರು. ಅಧ್ಯಕ್ಷತೆಯನ್ನು ರಂಗಸಂಪದದ ಪೋಷಕರಾದ ಮಧ್ವಾಚಾರ್ಯ ಆಯಿ ಅವರು ವಹಿಸಿದ್ದರು.
ಮುಖ್ಯ ಅತಿಥಿಗಳಾಗಿ ರಾ.ಚ. ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಸಿ. ಎಂ. ತ್ಯಾಗರಾಜ ಆಗಮಿಸಿದ್ದರು. ವಿಶ್ವ ರಂಗಭೂಮಿ ದಿನದ ಸಂದೇಶವನ್ನು ಶ್ರೀಮತಿ ಪದ್ಮಾ ಕುಲಕರ್ಣಿ ವಾಚನ ಮಾಡಿದರು. ರಂಗಸಖ ಪ್ರಶಸ್ತಿ ವಾಚನವನ್ನು ಯೋಗೇಶ ದೇಶಪಾಂಡೆ ಮಾಡಿದರು. ಪ್ರಸಾದ ಕಾರಜೋಳ ವಂದಿಸಿದರು. ಶ್ರೀಮತಿ ವೀಣಾ ಹೆಗಡೆ ನಿರೂಪಿಸಿದರು.

# ಸಿಸಿ ಟಿವಿ ಅಳವಡಿಕೆ ಜಂಟಿ ಸಮೀಕ್ಷೆ



**ಕೊಲ್ಹಾರ :** ಪಟ್ಟಣದ ಹತ್ತಿರ ರಾಷ್ಟ್ರೀಯ ಹೆದ್ದಾರಿ 218 ರ ಕೃಷ್ಣಾ ನದಿಗೆ ನಿರ್ಮಿಸಿದ ಕೊರ್ತಿ ಕೊಲ್ಹಾರ ಸೇತುವೆ ಮೇಲೆ ಅಪಘಾತಗಳನ್ನು ತಡೆಗಟ್ಟುವ,ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಲ್ಲಿ ಹಾಗೂ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹೈಮ್ಯಾಕ್ಸ್ ದೀಪಗಳು ಹಾಗೂ ಸಿಸಿ ಟಿವಿ ಅಳವಡಿಕೆಯ ಕುರಿತು ಪೊಲೀಸ್ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನೇತೃತ್ವದಲ್ಲಿ ಸೋಮವಾರ ಜಂಟಿ ಸಮೀಕ್ಷೆ ನಡೆಸಲಾಯಿತು.

ಈ ಸಂದರ್ಭದಲ್ಲಿ ರಾಷ್ಟ್ರಿಯ ಹೆದ್ದಾರಿ ಪ್ರಾಧಿಕಾರದ ಸಹಾಯಕಕಾರ್ಯನಿರ್ವಾಹಕಅಭಿಯಂತರವಿವೇಕ ಮಠ ಮಾದ್ಯಮದವರೊಂದಿಗೆ ಮಾತನಾಡಿ ಕೊರ್ತಿ ಕೊಲ್ಹಾರ ಸೇತುವೆಯು ಸುಮಾರು ಮೂರು ಕಿಮೀ ವ್ಯಾಪ್ತಿ ಉಳ್ಳದ್ದಾಗಿದ್ದು ಪ್ರಯಾಣಿಕರ ಹಿತದೃಷ್ಟಿಯಿಂದ ಸೇತುವೆಯ ಎರಡು ಬದಿ 50 ಮೀಟರ್ ಒಂದರಂತೆ ಒಟ್ಟು ಸುಮಾರು 120 ಹೈಮ್ಯಾಕ್ಸ್ ಬಲ್ಬುಗಳನ್ನು ಅಳವಡಿಸುವ ಚಿಂತನೆ ನಡೆಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ ವರಿಷ್ಠಾಧಿಕಾರಿ ಶಂಕರ್ ಮಾರಿಹಾಳ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಭಿಯಂತರ ವಿಜಯ ಪಾಟೀಲ್, ಸಿ ಪಿ ಐ ಅಶೋಕ್ ಚೌವ್ಹಾನ್, ಪಿಎಸ್ಐ ಎಮ್.ಬಿ ಬಿರಾದಾರ ಸಹಿತ ಇನ್ನಿತರರು ಇದ್ದರು.

# ಸಮಸ್ಯೆಗಳಿಗೆ ಸ್ಪಂದಿಸಲು ಸರಕಾರಕ್ಕೆ ಒತ್ತಾಯ–ಶಾಸಕ ಗುಡಗುಂಟಿ



**ಜಮಖಂಡಿ :** ಸರಕಾರಿ ಆಸ್ಪತ್ರೆಗೆ ಸಾಮಗ್ರಿ ಪೂರೈಸುವ ಗುತ್ತಿಗೆದಾರರಿಗೆ ಕಳೆದ ಹದಿನೈದು ತಿಂಗಳಿಂದ ಹಣ ಪಾವತಿಸದ ಹಿನ್ನೆಲೆಯಲ್ಲಿ ರೋಗಿಗಳಿಗೆ ಪೂರೈಸುವ ಆಹಾರ ಸ್ಥಗಿತಗೊಂಡು ರೋಗಿಗಳಲ್ಲಿ ಆತಂಕ ಉಂಟಾಗಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ತಾಲೂಕಾ ಸಾರ್ವಜನಿಕ ಆಸ್ಪತ್ರೆಗೆ ಭೇಟಿನೀಡಿದಸಂದರ್ಭದಲ್ಲಿಆಸ್ಪತ್ರೆಯಲ್ಲಿದಾಖಲಾದ ಒಳ ರೋಗಿಗಳಿಗೆ ಆಹಾರ ಹಂಚಿಕೆ ಸ್ಥಗಿತವಾದ ಸುದ್ದಿ ಕುರಿತು ಮುಖ್ಯ ವೈದ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 15 ತಿಂಗಳಿನಿಂದ ಆಹಾರ ಪೂರೈಸುವ ಗುತ್ತಿಗೆದಾರರಿಗೆ ಸರ್ಕಾರದಿಂದ ಹಣ ಪಾವತಿಯಾಗಿಲ್ಲ. ಗುತ್ತಿಗೆ ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಮುಂದಿನ ಅವಧಿಗೆ ಆಹಾರ ಪೂರೈಸುವ ಸರಕಾರದ ಆದೇಶವಿಲ್ಲದ ಕಾರಣ ಆಸ್ಪತ್ರೆಯಲ್ಲಿಯ ಒಳರೋಗಿಗಳಿಗೆ ಆಹಾರ ಪೂರೈಕೆ ಸ್ಥಗಿತಗೊಂಡಿದೆ. ಸ್ಥಳದಲ್ಲಿಯೇ ಜಿಲ್ಲಾ ಆರೋಗ್ಯಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ ಬಾಕಿ ಇರತಕ್ಕ ಜನೇವರಿ–2024 ರಿಂದ ಮಾರ್ಚ?2025 ವರೆಗೆ ಹಣವನ್ನು ಗುತ್ತಿಗೆದಾರರಿಗೆ ತ್ವರಿತವಾಗಿ ಬಿಡುಗಡೆ ಮಾಡಬೇಕು. ಮುಂದಿನ ಅವಧಿಗೆ ಸರಕಾರಿ ಆಸ್ಪತ್ರೆಗಳಲ್ಲಿ ಆಹಾರ ಪೂರೈಕೆಗೆ ಸೂಕ್ತ ಆದೇಶ ನೀಡಬೇಕೆಂದು ನಿರ್ದೇಶನ ನೀಡಿದರು.

ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶೇ. 40 ರಷ್ಟು ಔಷಧಿಗಳು ಮಾತ್ರ ಪೂರೈಕೆಯಾಗುತ್ತಿದೆ. ಇದರಿಂದ ರೋಗಿಗಳು ಗುಣಮುಖರಾಗುತ್ತಿಲ್ಲ. ಬೇಡಿಕೆಗೆ ತಕ್ಕಂತೆ ಔಷಧಿಗಳನ್ನು ವಿತರಿಸಬೇಕು. ಆಸ್ಪತ್ರೆಯ ವಿದ್ಯುತ್ ಬಿಲ್ ಬಾಕಿ ಇದ್ದು ಯಾವುದೇ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಕಡಿತವಾಗಲಿದೆ ಎಂಬುವದು ಗೊತ್ತಿಲ್ಲ.

ಶೀಘ್ರವಾಗಿ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುವ ಮೂಲಕ ಜಿಲ್ಲಾಡಳಿತ ಮತ್ತು ರಾಜ್ಯ ಸರಕಾರಕ್ಕೆ ಒತ್ತಾಯಿಸಿದರು.

# ಯತ್ನಾಳ ಉಚ್ಚಾಟನೆ ಖಂಡಿಸಿ ತಾಳಿಕೋಟೆಯಲ್ಲಿ ಬೃಹತ್ ಪ್ರತಿಭಟನೆ



**ತಾಳಿಕೋಟೆ :** ಹಿಂದೂತ್ವದ ಸಂಖ್ಯೇತವಾಗಿರುವ ಬಿಜೆಪಿ ಪಕ್ಷವನ್ನು ಅಪ್ಪ ಮಕ್ಕಳು ಸೇರಿ ಮುಗಿಸಲು ಹೋರಟಿದ್ದಾರೆ ಅವರ ವಿರೂದ್ದ ದ್ವನಿ ಎತ್ತಿದ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಿರುವದು ಸರಿಯಲ್ಲಾ ಪಕ್ಷದ ಹೈ ಕಮಾಂಡ ಗೌರವಯುತವಾಗಿ ಯತ್ನಾಳ ಅವರನ್ನು ಪಕ್ಷಕ್ಕೆಮರುಸೇರ್ಪಡೆಮಾಡಿಕೊಳ್ಳಬೇಕೆಂದು ಸ್ವಾಮಿ ವಿವೇಕಾನಂದ ಯುವ ಬ್ರೀಗೇಡ್ ಸಂಚಾಲಕ ರಾಘವ ಅಣ್ಣಿಗೇರಿ ಅವರು ನುಡಿದರು.

ಬುಧವಾರರಂದು ಕೇಂದ್ರ ಮಾಜಿ ಸಚೀವ ವಿಜಯಪುರ ನಗರದ ಶಾಸಕ ಬಸನಗೌಡ ಪಾಟೀಲ(ಯತ್ನಾಳ) ಅವರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟಿಸಿರುವದನ್ನು ಖಂಡಿಸಿ ತಾಳಿಕೋಟೆ ಪಟ್ಟಣದಲ್ಲಿ ಜರುಗಿದ ಬೃಹತ್ ಪ್ರತಿಭಟನಾ ರ‍್ಯಾಲಿಯ ನೇತೃತ್ವ ವಹಿಸಿ ಮಾತನಾಡುತ್ತಿದ್ದ ಅವರು ನಮಗೆ ಜಾತಿ ಧರ್ಮಕ್ಕಿಂತ ದೇಶವೇ ಮುಖ್ಯವಾಗಿದೆ ದೇಶಕ್ಕಿಂತ ಯಾವುದೂ ದೊಡ್ಡದಲ್ಲಾ ಇಂತಹ ದೇಶದಲ್ಲಿ ಹಿಂದೂ ಧರ್ಮದ ಕಾರ್ಯಕರ್ತರು ದೇಶ ರಕ್ಷಣೆಯಲ್ಲಿ ತೊಡಗಿದ್ದಾರೆ ಆದರೆ ಯಡಿಯೂರಪ್ಪ ಕುಟುಂಭ ದೇಶ ಮತ್ತು ಧರ್ಮಕ್ಕಿಂತ ಕುಟುಂಬವೇ ಮುಖ್ಯವೆಂದು ಹೊರಟಿದೆ ಈ ಅಪ್ಪ ಮಕ್ಕಳಿಂದ ಬಿಜೆಪಿ ಪಕ್ಷಕ್ಕೆ ಶಕ್ತಿ ಇಲ್ಲಾ ನಷ್ಟವೇ ಹೆಚ್ಚಾಗಿ ಆಗುತ್ತಿದೆ ಎಂದ ಅವರು ಮಾಜಿ ಶಾಸಕ ನಡಹಳ್ಳಿಗೆ ಏನು ರ‍್ಯಾದೆ ಇದೆ ನಿಮ್ಮೆಲ್ಲರ ಮುಖಾಂತರ, ಮಾಧ್ಯಮದವರ ಮುಖಾಂತರ ಏಚ್ಚರಿಕೆ ನೀಡುತ್ತೇನೆಜನತೆಒಮ್ಮೆಎರಡುಸಲಮೋಸ ಹೋಗಬಹುದು ಆದರೆ ಮೇಲಿಂದ ಮೇಲೆ ಮೋಸ ಹೋಗುವದಿಲ್ಲಾ ಅದಕ್ಕೆ ನಿಮ್ಮ ಮೋಸಕ್ಕೆ ಜನರು ಬಲಿಯಾಗದೇ ನಿಮ್ಮನ್ನು ಮಾಜಿಯನ್ನಾಗಿ ಮಾಡಿದ್ದಾರೆಂದರು. ನಿಜವಾದ ಹಿಂದೂತ್ವಕ್ಕಾಗಿ ಕೆಲಸ ಮಾಡುತ್ತೇವೆ ಹಿಂದೂತ್ವಕ್ಕಾಗಿ ಕೆಲಸ ಮಾಡುತ್ತಿದ್ದ ಯತ್ನಾಳ ಅವರ ಬೆನ್ನಿಗೆ ಹಿಂದೂ ಕಾರ್ಯಕರ್ತರು ನಾವುಗಳು ನಿಲ್ಲುತ್ತೇವೆ ಬರುವಂತಹ ವಿಧಾನಸಭಾ ಚುನಾವಣೆಯಲ್ಲಿ ಟಿಕೇಟ್ ಕೊಡುವಂತಹ ಸಮಯದಲ್ಲಿ ಭಾರತೀಯ ಜನತಾ ಪಕ್ಷದ ಮುಖ್ಯ ಘಟ್ಟದಲ್ಲಿ ಯತ್ನಾಳ ಅವರೂ ಕೂಡಾ ಇರಲಿದ್ದಾರೆಂದು ಭವಿಷ್ಯ ನುಡಿದ ಅಣ್ಣಿಗೇರಿ ಅವರು ಅಪ್ಪ ಮಕ್ಕಳು ಕುಟುಂಬ ಮುಖ್ಯವೆಂದು ಮುಂದೆ ಹೊರಟಿದ್ದಾರೆ ದೇಶ ಮುಖ್ಯವೆಂದು ಯತ್ನಾಳ ಅವರು ಮುಂದೆ ಹೊರಟಿದ್ದಾರೆ ಕೊನೆಯಲ್ಲಿ ಸತ್ಯಕ್ಕೆ ಜಯ ಎಂಬಂತೆ ಯತ್ನಾಳ ಅವರಿಗೆ ಜಯ ಸಿಗುಗಲಿದೆ ಎಂದ ಅವರು ಬಿಜೆಪಿ ಹೈ ಕಮಾಂಡ ರಾಜ್ಯಾಧ್ಯಂತಹ ಯತ್ನಾಳ ಅಭಿಮಾನಿಗಳಿಂದ ನಡೆಯುತ್ತಿರುವ ಹೋರಾಟವನ್ನು ನೋಡುತ್ತಿದೆ ಯಾರಿಗೆ ಯಾರೂ ಹೋರಾಟ ಮಾಡು ಎಂದು ಹೇಳಿಲ್ಲಾ ಹಿಂದೂ ಧರ್ಮದ ರಕ್ಷಣೆಗೆ ನಿಂತಿರುವ ಯತ್ನಾಳ ಅವರ ಬೆನ್ನಿಗೆ ಹಿಂದೂ ಸಮಾಜ ಒಗ್ಗೂಡಿ ನಿಲ್ಲುತ್ತಿದೆ ಕೂಡಲೇ ಬಿಜೆಪಿ ಹೈಕಮಾಂಡ ಯತ್ನಾಳ ಅವರನ್ನು ಗೌರವಯುತವಾಗಿಪಕ್ಷಕ್ಕೆಕರೆದುಕೊಳ್ಳಬೇಕು ಇಲ್ಲದಿದ್ದರೆ ಹಿಂದೂಗಳ ತಾಳ್ಮೆ ಹೆಚ್ಚಾದರೆ ರಾಜ್ಯದಲ್ಲಿ ರೋಶಾಗ್ನೇ ಶುರವಾಗಲಿದೆ ಎಂದರು. ಮಾಜಿ ಶಾಸಕ ತಮ್ಮ ರಕ್ಷಣೆಗಾಗಿ ಪೊಲೀಸ್ ರಕ್ಷಣೆ ಕೋರಿದ್ದಾರಂತೆ ನಿಮಗೆ ಯಾರು ಹೊಡೆಯುತ್ತಾರೆ ಯಾರು ಹೊಡೆಯಲಿದ್ದಾರೆಂದು ಮೌಖಿಕವಾಗಿ ಛಾಟಿ ಬೀಸಿದ ಅಣ್ಣಿಗೇರಿ ಅವರು ಅಟಲ್‌ಜಿ ಅವರು ಹೇಳಿದ ಮಾತನ್ನು ಪ್ರಸ್ಥಾಪಿಸಿ ಭಾರತ ಹೇ ಭೂಮಿಕಾ ತುಕಡಾ ನಹಿಹೈ ಎಂಬುದನ್ನು ಅರ್ಥೈಸಿ ತೋರಿಸಿದರು. ಹಮ್ ಕೋ ಫರ್ವ ಹೈ ಅಮ್ ಹಿಂದೂ ಹೈ ನರೇಂದ್ರಮೋದಿಜಿಕಿ ಅಭಿಮಾನ ಹೈ ಹಮ್ ಕೋ ಫರ್ವ ಹೈ ಯೋಗಿ ಆಧಿತ್ಯನಾಥಾಜಿಕಿ ಅಭಿಮಾನಿ ಹೈ ಹಮ್ ಕೋ ಫರ್ವ ಹೈ ಅಮಿತಶಾಜಿಕಿ ಅಭಿಮಾನಿ ಹೈ ಹಮ್ ಕೋ ಬಹುತ್ ಫರ್ವ ಹೈ ಭಾಜಪಾಕಿ ಅಭಿಮಾನಿ ಹೈ ಹಮ್ ಕೋ ಕರ್ನಾಟಕ ವಾಲೋಂಕೋ ಫರ್ವಹೈಯತ್ನಾಳಜಿಕಿಎಂದುಹಿಂದಿಯಲ್ಲಿ ಕೆಲವು ವಿಷಯಗಳನ್ನು ಪ್ರಸ್ಥಾಪಿಸಿದ ಅಣ್ಣಿಗೇರಿ ಅವರು ಇವತ್ತು ಕೆಲವು ಸ್ವಯಂ ಘೋಷಿತ ಕೆಲವು ನಾಯಕರಿಗೆ ತಿಳಿ ಹೇಳುತ್ತೇನೆ ಭಾರತದ ಲೋಕಸಭೆಯಲ್ಲಿ ವಕಪ್‌ಗೆ ಸಂಬಂದಿಸಿ ಅಮೇಂಟ್ ಬಿಲ್ ಪಾಸಾಗುತ್ತಿದೆ ಕರ್ನಾಟಕದ ಮಠ ಮಂದಿರಗಳು, ರೈತರ ಸಾಮಾನ್ಯ ಜಮೀನನ್ನು ಜಿಹಾದಿ ವಕಫ್‌ದವರು ಹೊಡೆಯಲು ಮುಂದಾಗಿದ್ದರು ಅದನ್ನು ಉಳಿಸಲು ಮೊದಲು ದ್ವನಿ ಎತ್ತಿದವರು ಬಸನಗೌಡ ಪಾಟೀಲ(ಯತ್ನಾಳ) ಅವರು ಆಗಿದ್ದಾರೆಂದರು. ರೈತರ ಗೋಸ್ಕರ ಮಠ ಮಾನ್ಯಗಳ ಜಮೀನುಗಳನ್ನು ಉಳಿಸುವ ಗೋಸ್ಕರ ಹಾಗೂ ಸಾರ್ವಜನಿಕರ ಮುಕ್ತ ಜಮೀನುಗಳನ್ನು ಉಳಿಸುವದಕ್ಕಾಗಿ ಎಲ್ಲರೂ ನರೇಂದ್ರ ಮೋದಿಜಿ ಅವರು ತಂದಂತಹ ವಕಪ್ ಅಮೇನ್‌ಮೇಂಟ್‌ಗೆ ಬೆಲೆ ಕೊಡಬೇಕಾಗುತ್ತದೆ ಎಂದ ಅಣ್ಣಿಗೇರಿ ಅವರು ಬಸನಗೌಡ ಪಾಟೀಲ ಅವರಿಗೆ ಉಚ್ಚಾಟನೆ ಮಾಡಿದಕ್ಕೆ ಕರ್ನಾಟಕ ರಾಜ್ಯ ಹಿಂದೂಗಳು ಬೀದಿಗೆ ಬಂದಿದ್ದಾರೆಂದರು. ಯತ್ನಾಳ ಅವರ ಜೊತೆಯಲ್ಲಿ ಹಿಂದೂತ್ವದ ಜೊತೆಯಲ್ಲಿ ನಾವಿದ್ದೇವೆ ಕುಟುಂಭ ರಾಜಕಾರಣ ನಾವು ಮಾಡಿಲ್ಲಾ ಏ ಸಿಂಪಲ್ ಹೈ ತಾಳಿಕೋಟೆ ಮೇ ಅವಾಜ್ ನಹಿ ಹೈ ಪೂರೇ ಕರ್ನಾಟಕ ಮೇ ಹರ್ ಏಕ್ ಜನತಾ ಪಾರ್ಟಿಕಿ ಕಾರ್ಯಕರ್ತಕಿ ಅವಾಜ್ ಹೈ ಬಸನಗೌಡ ಪಾಟೀಲ ಯತ್ನಾಳ ಕೋ ಸೇಂಟ್ರೀಲ್ ಹೈಕಮಾಂಡ ಕಹೇತೇ ಹೋ ಸ್ಟೇಟ್ ಪ್ರಸಿಡೆಂಟ್ ಬನಾಯಿ ಹೈ ಏ ಹಿಂದೂತ್ವಕೇಲಿಯೇ ಯತ್ನಾಳ ಕೇಲಿಯೇ ಹೈ ಎಂದರು. ಯತ್ನಾಳ ಅವರು ಯಾರಿಗೂ ತಮ್ಮ ಬಗ್ಗೆ ಪ್ರತಿಭಟನೆ ಮಾಡಲು ಹೇಳಿಲ್ಲಾ ಕಳಿಸಿಲ್ಲಾ ಇದರ ಬಗ್ಗೆ ಮನವರಿಕೆ ಮಾಡುವಂತಹ ಕೆಲಸವನ್ನು ರಾಷ್ಟ್ರ ಭಕ್ತರು ಮಾಡಲು ಮುಂದಾಗಿದ್ದಾರೆ ಈ ಸಂದರ್ಬದಲ್ಲಿ ಅಭಿನಂದನೆ ಸಲ್ಲಿಸುತ್ತೇನೆಂದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಪ್ರಭುಗೌಡ ದೇಸಾಯಿ ಅವರು ಮಾತನಾಡಿ ಬಸನಗೌಡ ಪಾಟೀಲ(ಯತ್ನಾಳ) ಅವರು ಒಬ್ಬ ವ್ಯಕ್ತಿಯಲ್ಲಾ ಹಿಂದೂ ಸಮಾಜದ ಒಂದು ದೊಡ್ಡ ಶಕ್ತಿಯಾಗಿದ್ದಾರೆ ಇತ್ತೀಚಗೆ ಬಿಜೆಪಿಕೆಲವುನಾಯಕರುಹಿಂದೂತ್ವಎಂದು ಯಾರು ರ‍್ತಾರೋ ಅವರನ್ನು ಮೊದಲು ಮಣ್ಣು ಕೊಡುವ ಕೆಲಸ ಮಾಡುತ್ತಾ ಸಾಗಿದ್ದಾರೆ ಹೀಗಾಗಿ ರಾಜ್ಯದಲ್ಲಿ ಬಿಜೆಪಿ ಪಕ್ಷ ಅಳಿವಿನಂಚಿಗೆ ಬರಲು ಕಾರಣವಾಗಿದೆ ಸದ್ಯ ಅಪ್ಪ ಮಕ್ಕಳು ಇಬ್ಬರೂ ಸೇರಿ ನಾ ಕಟ್ಟಿನ ಪಕ್ಷ ಎಂದು ಹೇಳುತ್ತಾ ಕರ್ನಾಟಕದಲ್ಲಿ ಬಿಜೆಪಿ ಪಕ್ಷವನ್ನು ಸರ್ವನಾಶ ಮಾಡಲು ಹೋರಟಿದ್ದಾರೆ ಕರಾವಳಿ ಭಾಗದಲ್ಲಿ ಹಲವಾರು ನಾಯಕರನ್ನು ಮುಗಿಸಿದ ಕೀರ್ತಿ ಈ ಅಪ್ಪ ಮಕ್ಕಳಿಗೆ ಸಲ್ಲುತ್ತದೆ ಎಂದು ಯಡಿಯೂರಪ್ಪ ಕುಟುಂಭದ ವಿರೂದ್ಧ ಕಿಡಿ ಕಾರಿದಅವರುಪಕ್ಷದಸಿದ್ದಾಂತವೇಗೊತ್ತಿಲ್ಲಾ ಮಾಜಿ ಶಾಸಕ ನಾಲಿಗೆ ಹರಿಬಿಡುವದನ್ನು ನಿಲ್ಲಿಸಬೇಕು ಹಿಂದೂತ್ವ ಮರೆತಿದ್ದಕ್ಕೆ ಮಾಜಿ ಆಗಿದ್ದೀರಿ ಮುಂದೆಯೂ ಮಾಜಿ ಆಗಿಯೇ ಉಳಿಯುತ್ತೀರಿ ಎಂದರು. ಪಟ್ಟಣದ ರಾಜವಾಡೆಯಿಂದ ಪ್ರಾರಂಭಗೊಂಡ ಪ್ರತಿಭಟನಾ ಮೇರವಣಿಗೆಯು ಕತ್ರಿ ಭಜಾರ, ಬಾಲಾಜಿ ಮಂದಿರ ರಸ್ತೆ, ವಿಠ್ಠಲ ಮಂದಿರ ರಸ್ತೆ, ಶಿವಾಜಿ ಮಹಾರಾಜರ ವೃತ್ತ, ಮಹಾರಾಣಾಪ್ರತಾಪ ವೃತ್ತ, ಬಸ್ ನಿಲ್ದಾಣದ ಮುಂಭಾಗದ ರಸ್ತೆಯ ಮೂಲಕ ಹಾಯ್ದು ಬಸವೇಶ್ವರ ವೃತ್ತದಲ್ಲಿ ಭಹಿರಂಗ ಸಭೆಯಾಗಿ ಮಾರ್ಪಟ್ಟಿತು. ಪ್ರತಿಭಟನೆಯ ವೇಳೆ ಬಿ.ಎಸ್.ಯಡಿಯೂರಪ್ಪ, ವಿಜೇಂದ್ರ ಯಡಿಯೂರಪ್ಪ ಹಾಗೂ ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ) ಅವರ ಭಾವಚಿತ್ರಕ್ಕೆ ಚಪ್ಪಲಿ ಹಾರ ಹಾಕುವದರೊಂದಿಗೆ ಮರವಣಿಗೆ ನಡೆಸಿ ಬಸವೇಶ್ವರ ವೃತ್ತದಲ್ಲಿ ಪ್ರತಿಕೃತಿಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ನಾಗರಾಳ ಹುಲಿ ಗ್ರಾಮದ ಡಾ.ಬಿ.ಎಸ್.ಪಾಟೀಲ, ಮಡುಸಾಹುಕಾರ ಬಿರಾದಾರ, ಕಿತ್ತೂರ ರಾಣಿ ಚೆನ್ನಮ್ಮ ಸಂಘದ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಅಶ್ವೀನಿ ಬಿರಾದಾರ,ಮಾತನಾಡಿದರು. ಪ್ರತಿಭಟನಾ ನೇತೃತ್ವವನ್ನು ತಾಳಿಕೋಟೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹಿಂದೂಪರ ಸಂಘಟನೆಗಳ ಮುಖಂಡರು ಹಾಗೂ ಸಾವಿರಾರು ಜನ ಯತ್ನಾಳ ಅಭಿಮಾನಿ ಬಳಗದವರು ಭಾಗವಹಿಸಿದ್ದರು.

## ಖ್ಯಾತ ಚಿತ್ರನಟ ಮನೋಜಕುಮಾರ ನಿಧನಕ್ಕೆ ಸಂತಾಪ



**ವಿಜಯಪುರ :** ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಖ್ಯಾತ ಚಿತ್ರನಟ ಮನೋಜಕುಮಾರ ಅವರ ನಿಧನಕ್ಕೆ ಕರ್ನಾಟಕ ಕಲಾ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ. ಮನೋಜಕುಮಾರ ಅವರು ತಮ್ಮ ಕಲಾ ಸೇವೆಯನ್ನು ನಾಟಕಗಳಲ್ಲಿ ಅಭಿನಯಿಸುತ್ತಾ ಹಲವಾರು ಖ್ಯಾತ ಚಿತ್ರಗಳನ್ನು ನಿರ್ಮಿಸುವ, ನಟಿಸುವ ಮೂಲಕ ವಿಶೇಷವಾಗಿ ಉಪಕಾರ' ಚಿತ್ರದಮೇರೆ ದೇಶ ಕಾ ಧರತಿ' ಹಾಡು ಚಿತ್ರ ರಸಿಕರ ಮನದಲ್ಲಿ ಸದಾ ಉಳಿಯುವಂತೆ ಹಾಗೂ ದೇಶಪ್ರೇಮದ ಹಿನ್ನೆಲೆಯಲ್ಲಿ ರೈತನ ಹಾಗೂ ಸೈನಿಕನ ಮಹತ್ವ ಬಿಂಬಿಸುವ ಉಪಕಾರ' ಚಿತ್ರ ದೇಶದಲ್ಲಿಯೇ ಅಷ್ಟೇ ಅಲ್ಲ ವಿಶ್ವದಲ್ಲಿಯೇ ಖ್ಯಾತನಾಮವಾಗಿತ್ತು ಎಂದು ಪದಾಧಿಕಾರಿಗಳು ತಿಳಿಸಿದ್ದಾರೆ. ಮನೋಜಕುಮಾರ ಅವರುರೋಟಿ ಔರ್ ಕಪಡಾ', ಬೇಇಮಾನ ಮೊದಲಾದ ಚಿತ್ರಗಳಲ್ಲಿ ಅವರು ಅಮೋಘವಾಗಿ ಅಭಿನಯಿಸಿದ್ದರು. ದಿವಂಗತ ಮನೋಜ ಕುಮಾರ ಅವರಿಗೆ ಪದ್ಮಶ್ರೀ, ದಾದಾಸಾಹೇಬ ಫಾಲ್ಕೆ ಮೊದಲಾದ ರಾಷ್ಟ್ರೀಯ ಪುರಸ್ಕಾರಗಳಲ್ಲದೇ ಅನೇಕ ಪ್ರಶಸ್ತಿಗಳು ದೊರಕಿದ್ದವು. ತಮ್ಮ ಅಮೋಘವಾದ ಅಭಿನಯದಿಂದ ಅವರು ಚಿತ್ರರಸಿಕರ ಮನದಲ್ಲಿ ಚಿರಂತರವಾಗಿ ಉಳಿಯುವಂತಹವರು. ಅವರ ಶ್ರೇಷ್ಠ ಚಿತ್ರ 'ಉಪಕಾರ' ಭಾರತೀಯ ಚಿತ್ರ ರಸಿಕರು ಎಂದೂ ಮರೆಯಲಾರರು ಎಂದು ಅವರು ತಿಳಿಸಿದ್ದಾರೆ.

# ವೃದ್ಧಾಶ್ರಮದಲ್ಲಿ ಜನ್ಮದಿನ ಮತ್ತು ವಿವಾಹ ವಾರ್ಷಿಕೋತ್ಸವ ಸಮಾರಂಭದಲ್ಲಿ ಶಿಕ್ಷಕಿ ಜಯಶ್ರೀ ಚಟ್ರಿಕಿ ಸಾಮಾಜಿಕ ಪ್ರಜ್ಞೆ ಅನನ್ಯ



**ಹೂವಿನ ಹಡಗಲಿ :** ಜನ್ಮದಿನವನ್ನು ವೃದ್ಧಾಶ್ರಮದಲ್ಲಿ ಆಚರಿಸುವ ಪರಿ ವಿನೂತನ ಪ್ರಯೋಗ ಎಂದು ಮಲ್ಲಿಗೆ ಯೋಗ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕೋಡಿಹಳ್ಳಿ ಕೊಟ್ರೇಶ ಹೇಳಿದರು.

ಪಟ್ಟಣದ ರಾಮಸ್ವಾಮಿ ಪ್ಲಾಟ್ ವಿಜಯನಗರ ಬಡಾವಣೆಯಲ್ಲಿರುವ ಕೃಪಾಶ್ರಯ ವೃದ್ಧಾಶ್ರಮದಲ್ಲಿ ಶನಿವಾರ ವಿಶಾಲಾಕ್ಷಿ ಮುತ್ತಣ್ಣ ಬಿದರಹಳ್ಳಿ 50 ನೇ ವಿವಾಹ ಮಹೋತ್ಸವ ಹಾಗೂ ಶಿಕ್ಷಕಿ ಜಯಶ್ರೀ ಚಟ್ರಿಕಿ 50 ನೇ ವರ್ಷದ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಯಸ್ಸಾಗಿ ಮಕ್ಕಳ ಪ್ರೀತಿಯಿಂದ ವಂಚಿತರಾದ ವೃದ್ಧಾಶ್ರಮದ ತಾಯಂದಿರ ಜೊತೆ ಜನ್ಮದಿನಾಚರಣೆ ಆಚರಿಸಿ ಅವರಿಗೆ ವಸ್ತ್ರ ಉಡುಗೊರೆ ಕೊಡುವ ಮೂಲಕ ಬಡವರ ಸೇವೆ ಸಲ್ಲಿಸಿದ್ದಾರೆ ಎಂದರು. ಫಾದರ್ ಹಾಲೇಶ್ ನಾಯ್ಕ ಸರ್ಕಾರಿ ನೌಕರರಲ್ಲಿ ಸಮಾಜ ಸೇವೆ ಸಲ್ಲಿಸುವ ಮನೋಭಾವ ಬೆಳೆಯುತ್ತಿದೆ. ತಮ್ಮ ದುಡಿಮೆಯ ಒಂದಿಷ್ಟು ಭಾಗವನ್ನು ದೀನರ ಬಡವರ ಬದುಕಿಗೆ ಹಂಚುವುದು ದೇವರಿಗೆ ಸಲ್ಲಿಸಿದಂತೆ ಎಂದು ತಿಳಿಸಿದರು.

ಕೃಪಾಶ್ರಯದ ಹಲಗಿ ಸುರೇಶ ವೃದ್ಧಾಶ್ರಮದಲ್ಲಿರುವ ತಾಯಂದಿರಿಗೆ ಪ್ರತಿನಿತ್ಯ ಉತ್ತಮ ಗುಣಮಟ್ಟದ ಉಪಹಾರ ಊಟ ಒದಗಿಸಲಾಗುತ್ತಿದೆ ಎಂದು ಹೇಳಿದರು.

ಡಯಟ್ ಉಪನ್ಯಾಸಕ ಕೊಟ್ರೇಶ್ ಚಟ್ರಿಕಿ, ದೈಹಿಕ ಶಿಕ್ಷಕ ಮಲ್ಲಿಕಾರ್ಜುನ, ಕರ್ನಾಟಕ ಪ್ರೆಸ್ ಕ್ಲಬ್ ನ ಎಂ ದಯಾನಂದ, ಬಿಚ್ಚುಗತ್ತಿ ಖಾಜಾ ಹುಸೇನ್, ಬೆಂಕಿ ರವಿ ಇತರರು ಉಪಸ್ಥಿತರಿದ್ದರು. ವಿಶಾಲಾಕ್ಷಿ ಮುತ್ತಣ್ಣ ಬಿದರಹಳ್ಳಿ ಹಾಗೂ ಜಯಶ್ರೀ ಚಟ್ರಿಕಿ ರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಇದಕ್ಕೂ ಮೊದಲು ಪಟ್ಟಣದ ಎಸ್ ಆರ್ ಎಂ ಪಿ ಪಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಅಖಿಲ ಕರ್ನಾಟಕ ಸಾಮಾಜಿಕ ಟ್ರಸ್ಟ್ ಮೂಲಕ ಕಾಲೇಜು ವಿದ್ಯಾರ್ಥಿಗಳಿಗೆ ಉಪಹಾರದ ಸೇವೆ ಸಲ್ಲಿಸಿದರು.

# ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕೊಪ್ಪಳ ಜಿ.ಪಂ.ನಿಂದ ಅಗತ್ಯ ಕ್ರಮ

**ಕೊಪ್ಪಳ :** ಜಿಲ್ಲೆಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕೊಪ್ಪಳ ಜಿಲ್ಲಾ ಪಂಚಾಯತ್ ವತಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಅವರು ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲಾ ವ್ಯಾಪ್ತಿಯ 7 ತಾಲ್ಲೂಕುಗಳಲ್ಲಿಯ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಲ್ಲಿ ಈಗಾಗಲೇ ಎಲ್ಲಾ ತಾಲ್ಲೂಕು ಪಂಚಾಯತಿಗಳಲ್ಲಿ "ಸಹಾಯವಾಣಿ" ತೆರೆಯಲು ಸೂಚಿಸಲಾಗಿದ್ದು, ಅದರಂತೆ ತಾಲ್ಲೂಕು ಪಂಚಾಯತಿಗಳಲ್ಲಿ "ಸಹಾಯವಾಣಿ" ತೆರೆದು ಪತ್ರಿಕಾ ಪ್ರಕಟಣೆಯನ್ನು ನೀಡಿರುತ್ತಾರೆ. ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಕುಡಿಯುವ ನೀರಿನ ಸಹಾಯವಾಣಿ ತೆರೆಯಲಾಗಿದ್ದು, ಸಂಖ್ಯೆ: 08539–221207 ಆಗಿರುತ್ತದೆ.

ಕೊಪ್ಪಳ ಜಿಲ್ಲೆಯ 153 ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿಯ ಒಟ್ಟು 2,278 ಸರ್ಕಾರಿ ಕೊಳವೆ ಬಾವಿಗಳು ಮತ್ತು 5,551 ಖಾಸಗಿ ಕೊಳವೆ ಬಾವಿಗಳಿರುತ್ತವೆ. ಖಾಸಗಿ ಕೊಳವೆ ಬಾವಿಗಳ ಪೈಕಿ 776 ಕೊಳವೆ ಬಾವಿಗಳನ್ನು ತುರ್ತು ಸಂದರ್ಭದಲ್ಲಿ ಕುಡಿಯುವ ನೀರು ಒದಗಿಸಲು ಬಾಡಿಗೆ ಆಧಾರದ ಮೇಲೆ ಪಡೆಯಲು ಗುರುತಿಸಲಾಗಿದೆ. ಈಗಾಗಲೇ 11 ಗ್ರಾಮಗಳ ಪಂಚಾಯತಿಗಳ ಪೈಕಿ 14 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುವ ಹಿನ್ನೆಲೆಯಲ್ಲಿ 17 ಖಾಸಗಿ ಕೊಳವೆ ಬಾವಿಗಳನ್ನು (ಕೊಪ್ಪಳದಲ್ಲಿ14,ಕುಷ್ಟಗಿಯಲ್ಲಿ1ಮತ್ತುಕನಕಗಿರಿ 2ಕೊಳವೆಬಾವಿಗಳು)ಬಾಡಿಗೆಆಧಾರದಮೇಲೆ ಪಡೆದು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕ್ರಮವಹಿಸಲಾಗುತ್ತಿದೆ. ಈ ಗ್ರಾಮಗಳ ಪೈಕಿ ಕನಕಗಿರಿ ತಾಲ್ಲೂಕಿನ ಹಿರೇಖೇಡ ಗ್ರಾಮ ಪಂಚಾಯತಿಯ ಚಿಕ್ಕಖೇಡ ಮತ್ತು ಹುಲಿಹೈದರ್ ಗ್ರಾಮ ಪಂಚಾಯತಿಯ ಕನಕಾಪುರ ಗ್ರಾಮಗಳಿಗೆ ಸ್ಥಾನಿಕವಾಗಿ ಭೇಟಿ ನೀಡಿ,ಕುಡಿಯುವನೀರಿನಸಮಸ್ಯೆಪರಿಹರಿಸಲು ಕ್ರಮವಹಿಸುವಂತೆಸಂಬಂಧಪಟ್ಟಅಧಿಕಾರಿಗಳಿಗೆ ಸೂಕ್ತನಿರ್ದೇಶನನೀಡಲಾಗಿರುತ್ತದೆ.ಮುಂದಿನ 3 ತಿಂಗಳುಗಳಲ್ಲಿ 111 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬರಬಹುದೆಂದು ಅಂದಾಜಿಸಲಾಗಿರುತ್ತದೆ. ಒಂದು ವೇಳೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ ಖಾಸಗಿ ಬೋರ್‌ವೆಲ್ ಹಾಗೂ ಖಾಸಗಿ ಟ್ಯಾಂಕರ್‌ಗಳ ಮೂಲಕ ನಿಯಮಾನುಸಾರ ನೀರು ಸರಬರಾಜು ಮಾಡಲು ಸಹ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ಅಲ್ಲದೇ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿಯ ಕುಡಿಯುವ ನೀರಿನ ಮೂಲಗಳನ್ನು ಕಾಲಕಾಲಕ್ಕೆ ನಿಯಮಾನುಸಾರ ಪರೀಕ್ಷೆಗೊಳಪಡಿಸಿ ಶುದ್ಧತೆಯನ್ನು ಖಚಿತಪಡಿಸಿಕೊಂಡು ಅಗತ್ಯ ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ ಮತ್ತು ಓ.ಹೆಚ್.ಟಿ., ಸಂಪು, ಮಿನಿ ವಾಟರ್ ಟ್ಯಾಂಕ್, ಜಿ.ಎಲ್.ಎಸ್.ಆರ್. ಹಾಗೂ ಇತರೆ ನೀರು ಸಂಗ್ರಾಹಕಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸಿ, ಶುದ್ಧೀಕರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಜಿಲ್ಲೆಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಅಗತ್ಯವಾದ ಪೈಪ್‌ಲೈನ್ ಕಾಮಗಾರಿಗಳು, ಬೋರ್‌ವೆಲ್ ಕೊರೆಯಿಸುವುದು, ಬೋರ್‌ವೆಲ್‌ಗಳ ಫ್ಲಶಿಂಗ್ ಮಾಡಿಸುವುದು, ಇತ್ಯಾದಿ ಕಾಮಗಾರಿಗಳು ಕೈಗೊಳ್ಳಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕೊಪ್ಪಳ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು, ಇವರಿಂದ ಸಿದ್ಧಪಡಿಸಲಾದ ಕ್ರಿಯಾಯೋಜನೆಯು ರಾಜ್ಯಕಛೇರಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಕೊಪ್ಪಳ ವಿಭಾಗದಿಂದ ಕಳುಹಿಸಲಾಗಿರುತ್ತದೆ ಎಂದು ಕೊಪ್ಪಳ ಜಿಲ್ಲಾ ಪಂಚಾಯತ್ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿ ಖಂಡಿಸಿ ತಾಲೂಕು ಕಚೇರಿ ಮುಂದೆ ಪ್ರತಿಭಟನೆ



ಮಂಡ್ಯ, ಮಳವಳ್ಳಿ. ಹಾಲು.ಮೊಸರು,ವಿದ್ಯುತ್ ದರ , ಟೋಲ್ , ಮೆಟ್ರೋ ಸಾರ್ವಜನಿಕ ಸಾರಿಗೆ ದರ ಏರಿಕೆ ಮಾಡಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿ ಖಂಡಿಸಿ, ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ , ಘನತ್ಯಾಜ್ಯ ಸಂಗ್ರಹ, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಸಿಪಿಐ(ಎಂ) ವತಿಯಿಂದ ಕಾರ್ಯಕರ್ತರು

ಮಳವಳ್ಳಿ ಪಟ್ಟಣದ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪಟ್ಟಣದ ಅನಂತರಾಂ ವೃತ್ತ ದಿಂದ ಹೊರಟ ಪ್ರತಿಭಟನಾಕಾರರುಕೇಂದ್ರಹಾಗೂರಾಜ್ಯಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಾ ಪ್ರಮುಖ ಬೀದಿಗಳ ಮೂಲಕ ತಾಲ್ಲೂಕು ಮುಂದೆ ಜಮಾಯಿಸಿದರು.

ಈ ವೇಳೆ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಲಿಂಗರಾಜುಮೂರ್ತಿ ಮಾತನಾಡಿ, ರಾಜ್ಯ ಸರ್ಕಾರ ಏ 1 ರಿಂದ ಹಾಲು .ಮೊಸರು ದರವನ್ನು 4 ರೂ ಗೆ ಏರಿಸಿ ಜನ ಸಾಮಾನ್ಯರಿಗೆ ಹೊರೆ ಮಾಡಿದೆ. ಇದಲ್ಲದೆ ಕೇಂದ್ರ ಸರ್ಕಾರವು ಟೋಲ್ ದರವನ್ನು ಏರಿಕೆ ಮಾಡಿರುವುದನ್ನು ಸಿಪಿಐ(ಎಂ) ವಿರೋಧಿಸುತ್ತದೆ ಎಂದರು.

ಇದೇ ವೇಳೆ ಪ್ರಾಂತ ರೈತ ಸಂಘದ ಅಧ್ಯಕ್ಷ ಭರತ್ ರಾಜ್ ಮಾತನಾಡಿ, ಶಾಸಕರು , ಎಂಎಲ್ ಸಿ ಸಂಬಳವನ್ನು ಹೆಚ್ಚಳ ಆದರೆ ಜನಸಾಮಾನ್ಯರು ಬಳಸುವ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಮಾಡಿದ್ದಾರೆ ಕೂಡಲೇ ಹಿಂದಕ್ಕೆ ಪಡೆಯಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಇದೇ ವೇಳೆ ತಹಸೀಲ್ದಾರ್ ಲೋಕೇಶ್ ರವರಿಗೆ ಪ್ರತಿಭಟನಾಕಾರರು ಮನವಿಪತ್ರ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಸುಶೀಲ, ಜಿ. ರಾಮಕೃಷ್ಣ, ಮಹದೇವಮ್ಮ, ಗುರುಸ್ವಾಮಿ,ತಿಮ್ಮೇಗೌಡ, ಜಯಶೀಲ, ಪ್ರೇಮ ಸೇರಿದಂತೆ ಇನ್ನೂ ಹಲವರು ಇದ್ದರು.

ವರದಿ, ಎಸ್ ರವಿ ಹೊನ್ನೇನಹಳ್ಳಿ

# ವಕ್ಫ್ ತಿದ್ದುಪಡಿ ಕಾಯ್ದೆ 2025: ಮುಸ್ಲಿಂ ಮಹಿಳೆಯರಿಗೆ ಹೊಸ ಭರವಸೆ?

ಕೇಂದ್ರ ಸರ್ಕಾರವು ಪರಿಚಯಿಸಿರುವ ವಕ್ಫ್ (ತಿದ್ದುಪಡಿ) ಮಸೂದೆ 2025, ಮುಸ್ಲಿಂ ಮಹಿಳೆಯರಿಗೆ ಸಬಲೀಕರಣದ ಹೊಸ ದಾರಿ ತೋರಿಸುತ್ತಿದೆ ಎನ್ನಲಾಗಿದೆ. ಈ ಕಾಯ್ದೆಯ ಪ್ರಮುಖ ಅಂಶಗಳೇನು?

– *ಆನುವಂಶಿಕ ಹಕ್ಕುಗಳ ರಕ್ಷಣೆ*: ವಕ್ಫ್–ಅಲಾಲ್–ಔಲಾದ್ನಲ್ಲಿ ಮಹಿಳೆಯರ ಆನುವಂಶಿಕ ಹಕ್ಕುಗಳನ್ನು ಖಾತ್ರಿಪಡಿಸಲಾಗಿದೆ. ಮಹಿಳೆಯರಿಗೆ ಅವರ ಪಾಲಿನ ಆಸ್ತಿ ಸಿಗದಿದ್ದರೆ ಆಸ್ತಿಯನ್ನು ವಕ್ಫ್‌ಗೆ ಮೀಸಲಿಡುವಂತಿಲ್ಲ.

– *ಆರ್ಥಿಕ ಬೆಂಬಲ*: ವಿಧವೆಯರು, ವಿಚ್ಛೇದಿತ ಮಹಿಳೆಯರು ಮತ್ತು ಅನಾಥರಿಗೆ ವಕ್ಫ್ ಆಸ್ತಿಯಿಂದ ಆರ್ಥಿಕ ನೆರವು ಒದಗಿಸುವ ಗುರಿ ಇದೆ.

– *ಆಡಳಿತದಲ್ಲಿ ಪಾಲ್ಗೊಳ್ಳುವಿಕೆ*: ರಾಜ್ಯ ವಕ್ಫ್ ಮಂಡಳಿ ಮತ್ತು ಕೇಂದ್ರ ವಕ್ಫ್ ಸಮಿತಿಯಲ್ಲಿ ಕನಿಷ್ಠ ಇಬ್ಬರು ಮುಸ್ಲಿಂ ಮಹಿಳೆಯರಿಗೆ ಸ್ಥಾನ ಕಾಯ್ದಿರಿಸಲಾಗಿದೆ.

– *ಕಾನೂನು ಸಹಾಯ*: ಆನುವಂಶಿಕತೆ, ಕೌಟುಂಬಿಕ ವಿವಾದಗಳು ಮತ್ತು ಗೃಹ ಹಿಂಸಾಚಾರ ಪ್ರಕರಣಗಳಲ್ಲಿ ಮಹಿಳೆಯರಿಗೆ ಕಾನೂನು ನೆರವು ಒದಗಿಸುವ ಭರವಸೆ ನೀಡಲಾಗಿದೆ.

ಪ್ರೆಸ್ ಇನ್ಫರ್ಮೇಷನ್ ಬ್ಯೂರೋ (ಕಬಃ) ಪ್ರಕಾರ, ಈ ತಿದ್ದುಪಡಿಯು ಮುಸ್ಲಿಂ ಮಹಿಳೆಯರ ಹಕ್ಕುಗಳನ್ನು ರಕ್ಷಿಸಿ, ಅವರಿಗೆ ಆರ್ಥಿಕ ಮತ್ತು ಸಾಮಾಜಿಕ ಬೆಂಬಲ ನೀಡುವ ಗುರಿಯನ್ನು ಹೊಂದಿದೆ. ಆದರೆ ಈ ಭರವಸೆಗಳು ನನಸಾಗುತ್ತವೆಯೇ?

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State